ಶ್ರೀ ಕ್ಷೇತ್ರ ಶ್ರವಣಬೆಳಗೊಳದ ಸ್ಥಳಮಹಿಮೆಯಂತೂ ಅಲ್ಲಿನ ಅಧಿದೇವತೆಯಾದ ಶ್ರೀ ಕೂಷ್ಮಾಂಡಿನೀ ಯಕ್ಷಿಯ ಚರಿತೆಯೊಡನೆ ಹಾಸುಹೊಕ್ಕಾಗಿ ಹೆಣೆದುಕೊಂಡಿದೆ. ಅಂತೆಯೇ, ಶೈವ ಬ್ರಾಹ್ಮಣ ಸೋಮಶೇಖರನ ಮಡಡಿಯಾಗಿ ಜಿನಧರ್ಮದ ಆಚಾರ ವಿಚಾರಗಳ ಪ್ರಾದುರ್ಭಾವದಲ್ಲಿ ಆಸಕ್ತಿ ಮತ್ತು ಶ್ರದ್ಧೆಯನ್ನುಳ್ಳವಳಾಗಿ ಮುನಿಗಳ ಸೇವಾಕೈಂಕರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದಳು. ಇದರಿಂದ ಕುಪಿತನಾದ ಗಂಡನು ಆಕೆಯೊಡನೆ ಅಟಿಕ್ರೂರನಾಗಿ ನಡೆದುಕೊಂಡು ಅನಾಥಳನ್ನಾಗಿಸಿದನು. ಬದುಕಿನ ಬೆಂಬಿಡದು ಬವಣೆಯಿಂದ ಬೇಸತ್ತು ಜಂಜಡಳಾದ ಜಕ್ಕಳಮ್ಮನು ತನ್ನ ಅವಳಿ ಮಕ್ಕಳೊಂದಿಗೆ ಹೊಸಕಟ್ಟೆಯ ಕೆರೆಗೆ ಹಾರಿ ಪ್ರಾಣನೀಗಿಕೊಂಡಳು. ಆದರೆ ತಾನು ಆರ್ಜಿಸಿದ ಪುಣ್ಯಸಂಚಯದ ಫಲವಾಗಿ ಕೂಷ್ಮಾಂಡಿನೀಯಾಗಿ ಮರಹುಟ್ಟನ್ನು ಪಡೆದಳು. ತನ್ನ ಕ್ರೋಧಬುದ್ಧಿಯಿಂಡುಂಟಾದ ಘಟನಾವಳಿಗಳಿಂದ ವ್ಯಥಿತನಾಗಿ ಪಶ್ಚಾತ್ತಾಪಗೊಂಡ ಸೋಮಶೇಖರನೂ ಕೆರೆಗೆ ಹಾರಿ ಪ್ರಾಣತ್ಯಾಗಮಾಡಿಕೊಂಡು ದೇವಿಯು ವಾಹನವಾಗಿ ಪುನರ್ ಜನ್ಮ ತಾಳಿದನು. ಊರಿನಿಂದ ಸುಮಾರು ಮೂರು ಕಿ.ಮೀ.ಸಮೀಪದಲ್ಲಿರುವ ದೊಡ್ಡಕೆರೆ ಕೋಡಿಬಡಿಯಲ್ಲಿರುವ ಜಕ್ಕಳಮ್ಮನ ಗುಡಿಯು ಜಾನಪದ ಮಹತ್ವವನ್ನು ಪಡೆದಿದೆ. ಇದರ ಗರ್ಭಗುಡಿಯಲ್ಲಿ ನೇಮಿನಾಥ ತೀರ್ಥಂಕರ, ಸರ್ವಾಹ್ಣಯಕ್ಷ ಮತ್ತು ಕೂಷ್ಮಾಂಡಿನೀ ಯಕ್ಷಿಯ ಕೆತ್ತನೆಗಳಿವೆ.

ಶ್ರವಣಬೆಳದ ಮೇರುಸದೃಶ ಸೃಷ್ಟಿ ಶ್ರೀ ಗೋಮಟೇಶ್ವರ ಸ್ವಾಮಿಯ ಮೂರ್ತಿಯನ್ನು ಪ್ರತಿಷ್ಠಾಪಿಸಿ ತನ್ನ ಅದ್ವಿತೀಯ ಸಾಧನೆಯ ಹೆಮ್ಮೆಗೆ ಧರ್ಮಭೀರು ಶ್ರೀ ಚಾವುಂಡರಾಯನ ಒಳಗಾದನಷ್ಟೆ. ಆದರೆ ಕೂಷ್ಮಾಂಡಿ ನೀಯು ಗುಳ್ಳೆಕಾಯಜ್ಜಿಯ ರೂಪದಲ್ಲಿ ಕಾಣಿಸಿಕೊಂಡು ರಾಯನಿಗೆ ಒಂದು ಬಿಳ್ಳೆ ಹಾಲನ್ನಿತ್ತು ಅಪೂರ್ಣಗೊಂಡಿದ್ದ ಸ್ವಾಮಿಯ ಅಭಿಷೇಕವನ್ನು ಪೂರ್ಣ ಗೊಳಿಸಿ ಆತನಲ್ಲಿ ವಿವೇಕೋದಯವನ್ನುಂಟು ಮಾಡಿದ ಘಟನೆಯು ಧಾರ್ಮಿಕ ಚರಿತ್ರೆಯಲ್ಲಿನ ಮಹತ್ವದ ದಾಖಲೆಯಾಗಿದೆ. ಇನ್ನೊಂದು ನಂಬುಗೆ ಯಂತೆ ಶ್ರೀ ಪದ್ಮಾವತಿ ದೇವಿಯು ಗುಳ್ಳೆಕಾಯಿ ಅಜ್ಜಿಯಾಗಿ ಕಾಣಿಸಿ ಕೊಂಡುದಾಗಿ ಪ್ರತೀಟಿಯಿದೆ. ಸುವರ್ಣ ಶ್ರೀ ಕೂಷ್ಮಾಂಡಿನೀ ದೇವಿಯು ಮನೋಹರವಾದ ಶಿಲ್ಪಕಲಾ ಸೊಬಗನ್ನು ಕರ್ನಾಟಕದ ವಿವಿಧೆಡೆಗಳಲ್ಲಿ ದರ್ಶಿಸಬಹುದು. ಸರ್ವೇ ಸಾಮಾನ್ಯ ವಾಗಿ ಆಸೀನಳಾಗಿರುವ ದೇವಿಯು ದ್ವಿಭುಜೆಯಾಗಿ ೞಊಪಾಡ ಉಗುರುಗಳು ನ್ನುಳ್ಳ ಎಡಗೈಯಲ್ಲಿ ಹಣಬೆ ಮತ್ತೆ ಕೆಲವು ಶಿಲ್ಪಗಳಲ್ಲಿ ಅಭಯಹಸ್ತ ಹೊಂದಿ ಸುಖಪ್ರದಾಯಿನಿ ಯಾಗಿ ಹೂಗೊಂಚಲನ್ನು ಹೊಂದಿರುವಳು. ಕಿರೀಟಧಾರಿಣಿಯಾಗಿ ಕಂಠ ಹಾಗೂ ವಕ್ಷಸ್ಥಳಗಳಲ್ಲಿ ಸರ್ವಾಭರಣ ಪುಷ್ಪಸು ಶೋಭಿತಳಾಗಿರುವಳು. ಸಿಂಹವಾಹಿನಿ ಯಾಗಿ ಕಣ್ಮನಹೃದ್ಯಳಾಗಿರುವಳು. ಸಾಮಾನ್ಯವಾಗಿ ದೇವಿಯು ಇಬ್ಬದಿಯಲ್ಲಿ ಆಕೆಯ ಮಕ್ಕಳಾದ ಸುಭಂಕರ ಮತ್ತು ಪ್ರಿಯಂಕರರಿರುವರು. ಹಿಂಬದಿಯಲ್ಲಿ ಅಲಂಕಾರಿಕ

ಪ್ರಭಾವಳಿಯಿರುವುದು. ಶ್ರವಣಬೆಳೆಗೊಳದ ಚಂದ್ರಗಿರಿ ( ಚಿಕ್ಕಬೆಟ್ಟ) ಯ ಚಾವುಂಡರಾಯ ಬಸದಿ, ಚಂದ್ರಪ್ರಭ ( ವಕ್ರಗಚ್ಛ) ಬಸದಿ, ಕತ್ತಲೆ ಬಸದಿ, ಮತ್ತು ಪಾರ್ಶ್ವನಾಥ ಬಸದಿಯ ಮುಂಭಾಗದಲ್ಲಿರುವ ಬಹು ಎತ್ತರವಾದ ಮಾನಸ್ತಂಭದ ಮೆಲ ಭಾಗದ ಗೂಡಿನ ಉತ್ತರ ಮುಖದಲ್ಲಿಯಲ್ಲದೆ ಇಂದ್ರಗಿರಿ( ದೊಡ್ಡಬೆಟ್ಟ)ಯ ಸುತ್ತಾಲಯದಲ್ಲಿರುವ ನಯಕೀರ್ತಿಸಿದ್ಧಾಂತಚಕ್ರವರ್ತಿಗಳ ಶಿಷ್ಯನಾದ ಬಾಳಚಂದ್ರದೇವರ ಶಿಷ್ಯ ಮತ್ತು ಕೇತಿಶೆಟ್ಟಿಯ ಮಗ ಬಮ್ಮ ಶೆಟ್ಟಿಯು ಮಾಡಿಸಿ ಪ್ರತಿಷ್ಠಾಪಿಸಿದ ಮೂರ್ತಿ (೧೨೩೧), ಸವತಿ ಗಂಧವಾರಣ ಬಸದಿ, ಶಾಂತೀಶ್ವರ ಬಸದಿ, ಕಂಬದಹಳ್ಳಿಯ ಬಸದಿ, ಅಂಗಡಿ, ಸೇಡಂನ ಬಸದಿಯಲ್ಲಿರುವ ನಿಂತ ನಿಲುವಿನ ಅಪೂರ್ವ ಕೂಷ್ಮಾಂಡಿನೀ ಹಾಗೂ ಪತದ ಬಸ್ತಿಯಲ್ಲಿ ಶ್ರೀ ಕೂಷ್ಮಾಂಡಿನೀ ದೇವಿಯ ಶಿಲ್ಪಗಳಿವೆ. ಅಲ್ಲದೆ ಹೊಂಬುಜದ ಪ್ರಾಕಾರ, ಕನಕಗಿರಿ ( ಮಲೆಯೂರು) ಮತ್ತು ಹಳೇ ಹುಬ್ಬಳ್ಳಿಯ ಶ್ರೀ ಅನಂತನಾಥ ತೀರ್ಥಂಕರ ಜಿನಾಲಯಗಳಲ್ಲಿ ದೇವಿಯು ಪೂಜಿಸಲ್ಪಡುತ್ತಿರುವಳು. ತಮಿಳುನಾಡಿನ ಜಿನಕಂಚಿಯ ಮಠದ ಗೋಡೆಯ ಮೆಲೆ ದೇವಿಯ ಚಿತ್ರಣ ವಿದೆ. ಉದಯಗಿರಿ–ಖಂಡಗಿರಿಯ ನವಮುನಿ ಹಾಗೂ ಢಂಕದ ಗುಹೆಗಳಲ್ಲಿ ದೇವಗಢದ ಮಂದಿರಗಳು ಮತ್ತು ಆಬೂವಿನ ವಸಹಿಯಲ್ಲಿ ಹಾಗೂ ಗುಪ್ತರ ಕಾಲಕ್ಕೆ ಸೇರಿದ ಪಾಷಾಣ ಪ್ರತಿಮೆಯೊಂದು ಮಥುರಾ ಮತ್ತು ಇನ್ನೊಂದು ಮೂರ್ತಿಯು ಲಖನೊ ಸಂಗ್ರಹಾಲಯಗಳಲ್ಲಿವೆ.

ಜೈನಾಚಾರ್ಯರು ಮತ್ತು ಕವಿಗಳು ಶ್ರೀದೇವಿಯನ್ನು ತಮ್ಮ ಕಾವ್ಯ ರಚನೆಗಳಲ್ಲಿ ಭಕ್ತಿಪೂರ್ವಕವಾಗಿ ನಮಿಸಿದ್ದಾರೆ. ಅಕಲಂಕದೇವನು ದೇವಿಯ ಪ್ರಭಾವದಿಂದ ಬೌದ್ಧರ ದೇವತೆ ತಾರಾಭಗವತಿಯ ವಿರುದ್ಧ ಪವಾಡಗಳನ್ನು ಎಸಗಿರುವನು. ಶಾಸ್ತ್ರಾರ್ಥಾದಿಗಳಲ್ಲಿ ದಿಗ್ವಿಜಯಿಯಾಗಿ ' ಸಕಲತಾರ್ಕಿಕ ಚೂಡಾಮಣಿ' ಯೆಂದು ಕರೆಯಲ್ಪಟ್ಟ ವಿದ್ವಾಂಸ ಅಕಳಂಕನಿಗೆ ಶ್ರೀ ಕೂಷ್ಮಾಂಡಿನೀ ದೇವಿಯು ಕನಸಿನಲ್ಲಿ ದರ್ಶನವಿತ್ತು, ' ನೀನು ನನ್ನ ಪ್ರಶ್ನೆಗಳಿಗೆ ಆಮೂಲಾಗ್ರಹವಾಗಿ ಉತ್ತರಿಸಿದರೆ ಗೆಲ್ಲಬಹುದು' ಎಂದಳು . ಗುರುವು ಹಾಗೆಯೇ ಮಾಡಿ ವಿಜಯಿಯಾದನು. ಪರಾಜಿತರಾದ ಬೌದ್ಧರು ಕಳಿಂಗ ದೇಶದಿಂದ ಸಿಲೋನ್ ದೇಶಕ್ಕೆ ತೆರೆಳಿದರು. ಪೂಗತಟಾಕದ ಜೈನಬ್ರಾಹ್ಮಣ ಕನ್ನಡ ಕವಿಯಾದ ದೇವರಸನ ಮಗನು ( ಕ್ರಿ.ಶ.ಸು.೧೬೫೦) ತನ್ನ ' ಗುರುದತ್ತ ಚರಿತೆ' ಯೆಂಬ ಸಾಂಗತ್ಯ ಕಾವ್ಯದಲ್ಲಿ ದೇವಿಯನ್ನು ಸ್ತುತಿಸಿರುವನು. ಆಚಾರ್ಯ ಸಮಂತಭದ್ರರು ತಮ್ಮ ನ್ಯಾಯಶಾಸ್ತ್ರ ಕೃತಿಗ್ರಂಥವಾದ ' ಸ್ವಯಂಭೂಸ್ತೋತ್ರ'ದಲ್ಲಿ ದೇವಿಯನ್ನು ಖಚರಯೋಷಿತ ( ವಿದ್ಯಾದರಿ) ಯೆಂದು ಮತ್ತು ಜಿನಸೇನರ 'ಹರಿವಂಶ ಪುರಾಣ ಪ್ರಶಸ್ತಿ'ಯಲ್ಲಿ ದೇವಿಯನ್ನು ಸ್ಮರಿಸಲಾಗಿದೆ. ಮಂಗಳವಾರವು ದೇವಿಯ ವಿಶೇಷ ದಿನವೆಂಬ ಪರಿಗಣಿಸಲ್ಪಟ್ಟು ಅಂದು ಭಕ್ತಾದಿಗಳು ವಿಧಿವತ್ತಾಗಿ ಆಕೆಯ ಅರ್ಚನೆಗೈಯ್ಯುವರು.

ಜಿನಧರ್ಮ ಕುಲದೀಪಕಳಾದ ಶ್ರೀ ಕೂಷ್ಮಾಂಡಿನೀ ದೇವಿಯು ಸಕಲ ಗೌರವಾನ್ವಿತ ಯಕ್ಷಿಯಾಗಿ ವಿಶಿಷ್ಟತೆಯನ್ನು ಮೆರೆದಿರುವಳು.

ಜೈನಧರ್ಮ ಮತ್ತು ಶ್ರೀಕೃಷ್ಣ

ಭಾರತೀಯ ಧಾರ್ಮಿಕ ಪರಂಪರೆಯಲ್ಲಿ ಶ್ರೀಕೃಷ್ಣನ ಸ್ಥಾನಮಾನ ವಿಶಿಷ್ಟ ತಮವೂ ಮತ್ತು ವಿಸ್ತಾರವಾದುದೂ ಆಗಿದೆ. ಜೈನ–ವೈದಿಕ–ಬೌದ್ಧಧರ್ಮ ಸಂಪ್ರದಾಯಗಳಲ್ಲಿ ಆತನ ತೇಜೋಮಯವಾದ ಬದುಕನ್ನು ಕಾಣಬಹುದು ಅದರಲ್ಲಿಯೂ ಜೈನಸಾಹಿತ್ಯದಲ್ಲಿನ ಕೃಷ್ಣನ ವಿವರಣೆಗಳು ಪೂರ್ವೇತಿಹಾಸ ಪುರುಷನ ಸಾಧನೆ–ಬೋಧನೆ ಕುರುತು ಚೆಂಬೆಳಕನ್ನು ಚೆಲ್ಲುವಂತಹುವಾಗಿವೆ.

ಕೃಷ್ಣನೆಂಬುವನು ಯಾರು ? ಆತನು ದೇವತೆಯೇ, ಮಾನವನೇ ಅಥವಾ ಕವಿಗಳ ಕಪೋಲಕಲ್ಪಿತ ಸೃಷ್ಟಿಯೇ ? ನಾಡಿನ ಜನರಹ ೃಷ್ಣನಾಮದ ಪಠನ ಭಕ್ತರಲ್ಲಿ ಆನಂದಾತಿಶಯವನ್ನು ಉಂಟುಮಾಡುತ್ತಿರುವುದು. ಆತನ ಐತಿಹ್ಯ ಕುರಿತು ಸಹಸ್ರಾರು ವರ್ಷಗಳಿಂದ ಪಂಡಿತ ಪಾಮರ ರಂಗಗಳಲ್ಲಿ ಸಾಕಷ್ಟು ಜಿಜ್ಞಾಸೆ ಸಾಗುತ್ತಿದೆ. ಆದರೆ ಸೂಕ್ತವಾದ ವಿವರಣೆ, ವಿಶ್ಲೇಷಣೆ ಮತ್ತು ವಿಮರ್ಶೆಗಳಿಂದ ಕೂಡಿದ ವಾಸ್ತವವಾಡಿಗಳ ನಿಲುವು–ಅಧ್ಯಯನವು ಈ ದಿಸೆಯಲ್ಲಿ ಗಮನಸೆಳೆಯುವಂಥದ್ದು.

ಮಹಾಭಾರತದ ಅವರ್ಣನೀಯ ಶಕ್ತಿ, ಲೋಕೋತ್ತರ ಹಾಗೂ ಲೋಕಚರಿತ ಮಾನಸ, ಪರಮಪುರುಷ, ವೀರಾಗ್ರಣಿ, ರಾಜಕಾರಣಿ, ರಸಿಕಾಗ್ರೇಸರ, ಮಹತೋಮಹಿಮ, ಸಾತ್ವೈಕಗುಣಿ, ಕಾರ್ಯಕುಶಲ, ಕ್ಷತ್ರಿಯನಾದರೂ ಬ್ರಾಹ್ಮಿಕ, ಸರ್ವತಂತ್ರನಿಪುಣ ಮತ್ತು ಜೀವಸ್ವರನಾದ ಕೃಷ್ಣನ ಸುತ್ತ ಅಸಾಮಾನ್ಯ ಮತ್ತು ಪವಾಡಸದೃಶ ಸಂಗತಿಗಳು ಹೆಣೆಯಲ್ಪಟ್ಟು, ಕಾಡು ಬೆಳೆದು ಕಗ್ಗಂಟಾಗಿರುವುದು ಸಹಜವೇ ಆಗಿದೆ.

ಕೃಷ್ಣನು ಆರ್ಯದೇವತೆಯೋ–ಆರ್ಯಪೂರ್ವನೋ ಎಂಬುದರ ಕುರಿತು ತರ್ಕವುಂಟು, ಪ್ರಾಕೃತ ಭಾಷೆಯ " ಕ್ವೊ" ಅರ್ಥಾತ್ ಕೃಷ್ಣನು ಜೈನ ಗ್ರಂಥಗಳಲ್ಲೂ ಉಲ್ಲೇಖಿಸಲ್ಪಟ್ಟಿರುವನು. ವೈದಿಕ ಮತ್ತು ಜೈನಭಾರತಗೆಳೆರಡರಲ್ಲಿಯೂ ಕೃಷ್ಣೋದಯಪರ್ವದ ರಚನೆ ಮುಖ್ಯ ಸಂಗತಿ.

ಜ್ಯೋತಿಷ್ಯ ಸಿದ್ಧಾಂತಗಳ ಪ್ರಕಾರ ಶ್ರೀಕೃಷ್ಣನ ಜನ್ಮ ಕುರಿತು ಎರಡು ಅಭಿಪ್ರಾಯಗಳು ವ್ಯಕ್ತವಾಗಿವೆ. ಶ್ರೀಮುಖ ಸಂವತ್ಸರದ ಶ್ರಾವಣ ಬಹುಳ ನವಮಿ ಶುದ್ಧ ಸಪ್ತಮಿ ತಿಥಿ ವೃಷಭ ಲಗ್ನದಲ್ಲಿ ಜನಿಸಿ ೧೨೫ ವರ್ಷ ೬ ತಿಂಗಳು ೮ ದಿನಗಳು ಬದುಕಿದ್ದನೆಂದೂ, ಇಲ್ಲ ಶ್ರಾವಣ ಮಾಸದ ಕೃಷ್ಣಪಕ್ಷ ಅಷ್ಟಮಿ ಮಂಗಳವಾರ

ರೋಹಿಣೀ–ವೃಷಭ ಲಗ್ನ ( ಕ್ರಿ.ಪೂ.೩೨೦೮) ದಂದು ಹುಟ್ಟಿ ೧೦೫ ವರ್ಷಗಳ ಆಯುರ್ಮಾನವನ್ನು ಕಳೆದನೆನ್ನಲಾಗಿದೆ.

ವರ್ತಮಾನದ ಕಾಲದ ೨೪ ತೀರ್ಥಂಕರರುಗಳಲ್ಲಿ ೨೨ ನೆಯ ತೀರ್ಥಂಕರನಾದ ಭಗವಾನ್ ನೇಮಿನಾಥ ( ಅರಿಷ್ಟನೇಮಿ) ನಿಗೂ ಮತ್ತು ಸಮಸಾಮಾಯಿಕರು ಮತ್ತು ಶ್ರೀಕೃಷ್ಣನಿಗೂ ನಿಕಟ ನಂಟು. ಇವರಿಬ್ಬರೂ ಸಮಸಾಮಾಯಿಕರು ಮತ್ತು ಮಹಾ ಅಹಿಂಸಾವ್ರತಿ. ದ್ವಾಪರಯುಗವು ಮುಗಿದು ಕಲಿಯುಗವು ಪ್ರಾರಂಭವಾದ ಸಂಧಿಕಾಲದಲ್ಲಿ ಮಹಾಭಾರತದ ಕುರುಕ್ಷೇತ್ರ ಸಮರವು ನಡೆಯಿತಂದೂ ( ಕ್ರಿ.ಪೂ.೩೧೩೯) ಮತ್ತು ಕಲಿಯುಗದ ಮೊದಲನೆಯ ದಿನವೇ ಶ್ರೀಕೃಷ್ಣನು ಈ ಜಗತ್ತಿನಿಂದ ಮರೆಯಾಗಿ ಪರಂಧಾಮವನ್ನೊಂದಿದನೆಂದೂ ವಿಷ್ಣು ಪುರಾಣವು ತಿಳಿಸುತ್ತದೆ. ಮೆಗಾಸ್ತೇನಿಸನು ಕೃಷ್ಣನ ಕಾಲವನ್ನು ಕುರಿತು " ಸಾಂಡ್ರೋಕೋಟಸ್" ಅಂದರೆ ಚಂದ್ರಗುಪ್ತನಿಗೂ ( ಕ್ರಿ.ಪೂ.೩೧೨) ಮತ್ತು " ಹಿರ್ ಕ್ಲೀಜ್" ಅಂದರೆ ಶ್ರೀಕೃಷ್ಣನಿಗೂ ೧೩೮ ಪೀಳಿಗೆಗಳ ಅಂತರವಿರುದೆನ್ನುತ್ತಾನೆ. ಇದರಂತೆ ಒಂದು ಪೀಳಿಗೆಗೆ ೨೦ ವರ್ಷಗಳೆಂದರೆ ಒಟ್ಟು ೨೭೬೦ ವರ್ಷಗಳ ಅಂತರವು ಇವರೀರ್ವರ ನಡುವೆ ಇರುವುದು. ಇದೇ ಕಾಲದಲ್ಲಿಯೂ ಅರಿಷ್ಟನೇಮಿಯ ಉಲ್ಲೇಖವಿರುವುದು ಮಹತ್ವದ್ದಾಗಿಡೆ.

ವೈದಿಕಧರ್ಮದ ರೀತ್ಯ ಕ್ಷತ್ರಿಯರಲ್ಲಿ ಸೂರ್ಯವಂಶ ಮತ್ತು ಚಂದ್ರವಂಶಗಳೆರಡಿದ್ದರೆ ಜೈನಮತದಲ್ಲಿ ಪುರು, ಕುರು, ನಾಥ, ಉಗ್ರ ಮತ್ತು ಹರಿ ಎಂಬುದಾಗಿ ಐದು ರಾಜವಂಶಗಳಿವೆ. ಶ್ರೀ ನೇಮಿನಾಥ ಮತ್ತು ಶ್ರೀಕೃಷ್ಣರು ಹರಿವಂಶಕ್ಕೆ ಸೇರಿದವರು. ಹರಿವಂಶ ಕುರುವಂಶದ ಅಂದರೆ ಪಾಂಡವ–ಕೌರವರ ಕಥಾಪ್ರಸಂಗ ವಿಶೇಷಸಂಗ ಜೈನಧರ್ಮದ ಸಂಸ್ಕೃತ–ಕನ್ನಡ ಕಾವ್ಯಗಳಲ್ಲಿ ಬೆರೆತು ಸಮಾಗಮಹೊಂದಿವೆ.

ಜೈನಸಾಹಿತ್ಯ ಪುರಾಣಗಳನ್ನು ಅವಲೋಕಿಸಿದಾಗ ಶ್ರೀಕೃಷ್ಣನ ಜೀವನ ವೃತ್ತಾಂತಗಳು ನಮ್ಮ ಧಾರ್ಮಿಕ ಸಂಸ್ಕೃತಿಯ ಪಡಿನೆರಳಿನಂತೆ ಹಾಸುಹೊಕ್ಕಾಗಿವೆ. ಗಂಗ ಸಾಮ್ರಾಜ್ಯದ ಮಹಾಮಂತ್ರಿ ಹಾಗೂ ಬೃಹತ್ ಗೊಮ್ಮಟ ಶಿಲ್ಪ ನಿರ್ಮಾಪಕ ಶ್ರೀ ಚಾಮುಂಡರಾಯನ ತ್ರಿಷಷ್ಟ ಶಲಾಕಾಪುರುಷರು ( ಕ್ರಿ.ಶ.೯೭೮) ಗದ್ಯಕಾವ್ಯದಲ್ಲಿ ಬರುವ ೬೩ ಮಂದಿ ಉತ್ತಮ ಪುರುಷ ಸಮೂಹದ ೯ ವಾಸುದೇವರು ( ನಾರಾಯಣರು ) ಗಳಲ್ಲಿ ಅರ್ಧಚಕ್ರಿ ಶ್ರೀಕೃಷ್ಣನು ಒಬ್ಬನು. ನೇಮಿಯ ತಂದೆ ಸಮುದ್ರವಿಜಯನ ಮತ್ತು ಕೃಷ್ಣನ ತಂದೆ ವಸುದೇವನೂ ಅಣ್ಣ–ತಮ್ಮಂದಿರು. ಸಮುದ್ರ ವಿಜಯನ ತಂದೆ ಅಂಧಕವೃಷ್ಣಿ ಮತ್ತು ವಸುದೇವನ ತಂದೆ ಭೋಜವೃಷ್ಣಿ ಈರ್ವರೂ ಒಂದೇ ಓರಗೆಯ ಸೋದರರು. ನೇಮಿನಾಥನ ತಾಯಿ ಶಿವಾದೇವಿ ವಸುದೇವನ ಇಬ್ಬರು ಮಡದಿಯರಾದ ರೋಹಿಣಿಯ ಗರ್ಭದಲ್ಲಿ ಬಲರಾಮನು ಮತ್ತು ದೇವಕಿಯ ಗರ್ಭದಲ್ಲಿ ಶ್ರೀಕೃಷ್ಣನು

ಜನಿಸಿದರು. ಕುಂತಿ ಮತ್ತು ಮಾದ್ರಿಯರು ಶ್ರೀಕೃಷ್ಣನ ಅತ್ತೆಯರು. ಸೋದರಳಿಯನಾದ ಶ್ರೀಕೃಷ್ಣನು ಕುಂತಿಯ ಮಕ್ಕಳೂ ಪಾಂಡವರು ಪಕ್ಷಪಾತಿ ಆಗಿದ್ದುದು ಸಹಜಸಮ್ಮತವೇ ಸರಿ.

೧ನೆಯ ಗುಣವರ್ಮನ ಹರಿವಂಶ ಪುರಾಣ ಅಥವಾ ಶ್ರೀ ನೇಮಿನಾಥ ಪುರಾಣ ( ಉಪಲಬ್ದವಿಲ್ಲ), ಪಂಡಿತಕವಿ ನೇಮಿಚಂದ್ರ ( ಕ್ರಿ.ಶ.೧೧೭೦) ನ ಚಂಪೂಕವ್ಯ ಅರ್ಧನೇಮಿ ಪುರಾಣ, ಕರ್ಣಪಾರ್ಯ ಕವಿ ( ಕ್ರಿ.ಶ.೧೧೪೫) ಯ ನೇಮಿನಾಥ ಪುರಾಣ, ಕವಿ ಸಾಳ್ವನ ( ಕ್ರಿ.ಶ.೧೫೫೦) ನ ಸಾಳ್ವ ಭಾರತ ಅಥವಾ ನೇಮಿನಾಥ ಪುರಾಣ, ಬಂಧುವರ್ಮ (ಕ್ರಿ.ಶ.೧೨೦೦) ನ ಹರಿವಂಶಾಭ್ಯುದಯ ಅಥವಾ ನೇಮಿನಾಥ ಪುರಾಣ, ಮೂರನೆಯ ಮಂಗರಸ ಕವಿ ( ಕ್ರಿ.ಶ.೧೫೦೮) ಯ ಹರಿವಂಶ ಅಥವಾ ನೇಮಿಜಿನೇಶ ಸಂಗತಿ, ಮಹಾಬಲ ಕವಿ ( ಕ್ರಿ.ಶ.೧೨೫೪) ಯ ನೇಮಿನಾಥ ಪುರಾಣ ಅಥವಾ ಹರಿವಂಶ ಪುರಾಣ ಮತ್ತು ಬ್ರಾಹ್ಮಣಾಂಕನ ಜಿನಭಾರತ ಆಗಮಿಕ ಷಟ್ಪದಿ ಕಾವ್ಯಗಳು ಶ್ರೀಕೃಷ್ಣನ ಹಿರಿಮೆ–ಗರಿಮೆಗಳನ್ನು ಸೊಗಸಾಗಿಯೂ ಮತ್ತು ಸವಿಸ್ತಾರವಾಗಿಯೂ ವರ್ಣಿಸಿರುವವು.

ಜೈನರ ನಂಬುಗೆಯಂತೆ ನೇಮಿನಾಥ, ಬಲರಾಮ ಮತ್ತು ಶ್ರೀಕೃಷ್ಣ ಈ ಮೂವರಿಗೂ ಒಟ್ಟಿಗೆ ಉಪನಯನ ಸಂಸ್ಕಾರವೇರ್ಪಟ್ಟು ಸಮುದ್ರ ವಿಜಯನು ಪ್ರಾಚೀನ ಗೀತೆಯನ್ನು ಉಪನಯನ ಸಂಸ್ಕಾರವೇರ್ಪಟ್ಟು ಸಮುದ್ರ ವಿಜಯನು ಪ್ರಾಚೀನ ಗೀತೆಯನ್ನು ಉಪದೇಶಿಸಿದನು. ನೇಮಿನಾಥನು ತೀರ್ಥಂಕರ ಪದವಿಯನ್ನು ಪಡೆದು ಇದನ್ನೇ ಮಾಗಧೀ ಭಾಷೆಯಲ್ಲಿ ಶ್ರೀಕೃಷ್ಣನಿಗೆ ವಿಸ್ತಾರವಾಗಿ ಹೇಳಿದನು. ತದನಂತರ ಈ ಗೀತೆಯನ್ನು ಕುರುಕ್ಷೇತ್ರ ಯುದ್ಧಸಮಯದಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಬೋಧಿಸಿದನು. ಅನೇಕ ವೇಳೆ ನೇಮಿಗೂ ಕೃಷ್ಣನಿಗೂ ಸ್ಪರ್ಧೆಗಳೇರ್ಪಟ್ಟು ವಿಜಯಿಯಾದ ನೇಮಿಯ ಹಿರಿಮೆಯನ್ನು ಒಪ್ಪಿಕೊಂಡು ಶ್ರೀಕೃಷ್ಣನು ಶ್ರೇಷ್ಠಪದವಿಯನ್ನು ಸ್ವೀಕರಿಸಿದನು.

ಶ್ರೀಮದ್ ಗುಣಭದ್ರಾಚಾರ್ಯ ವಿರಚಿತ ಉತ್ತರ ಪುರಾಣದಲ್ಲಿನ ನೇಮಿಸ್ವಾಮಿ ಚರಿತೆಯಲ್ಲಿ ಕೃಷ್ಣನ ಪಟ್ಟಮಹಿಷಿ ರುಕ್ಮಿಣಿ, ಬಲುಮೆಯ ಸತಿ ಸತ್ಯಭಾಮೆ ಮತ್ತು ಕುಮಾರ ಪ್ರದ್ಯುಮ್ನನ ವಿಶೇಷ ವೃತ್ತಾಂತಗಳಿವೆ. ಜೈನರ ಅಂಗವಾಙ್ಮಯದ ಒಂಬತ್ತನೆಯ ಅಂಗವಾದ ಅನುತ್ತರೋಪಪಾದಿಕ ದಶಾನಿಯು ಕೃಷ್ಣನು ಜೈನಧರ್ಮಾನುಯಾಯಿಯೆಂಬುದನ್ನು ಪ್ರತಿಪಾದಿಸುತ್ತದೆ.

ದುಷ್ಟಾಗ್ರೇಸರ ದೇವತೆ ಪೂತನಿಯು ವಿಭಂಗಜ್ಞಾನದಿಂದ ಬಾಲಕೃಷ್ಣನಿಗೆ ಮಾರುವೇಷ ಧರಿಸಿ ವಿಷಪ್ರಾಶನಗೈದುದು, ಜನ್ಮ ವಿತ್ತ ತಂದೆ ಮಧುರೆಯ ರಾಜ ಉಗ್ರಸೇನನನ್ನೇ ಸೆರೆಮನೆಯಲ್ಲಿ ಬಂಧಿಸಿ ಸಿಂಹಾಸನವನ್ನೇರಿದ ದುರುಳ ಕಂಸನನ್ನು ವಧಿಸಿದ್ದು, ಕಾಳಿಂಗ ಮರ್ದನ, ರುಕ್ಮಿಣೀ ಹರಣ, ಸತ್ಯಭಾಮಾ

ವಿವಾಹ ವಿವರ. ಗೋಪಾಲಕತ್ವ, ಗೋವರ್ಧನಗಿರಿಧಾರಿಕೆ ಮತ್ತು ಚಾಣೂರ ಕೃಷ್ಣರ ಮಲ್ಲಯುದ್ಧ ಪ್ರಸಂಗ ಪ್ರಸ್ತಾಪಗಳೆಲ್ಲವೂ ಜೈನ ಭಾರತದಲ್ಲಿ ಸವಿವರವಾಗಿ ವಿಶದೀಕರಿಸಲ್ಪಟ್ಟಿವೆ.

ಆಧಾರ ಗ್ರಂಥಗಳು :


೧. ಮೂರ್ತಿಶಿಲ್ಪಿ ನೆಲೆ ಹಿನ್ನೆಲೆ : ಪ್ರೊ.ಎಸ್.ಕೆ.ರಾಮಚಂದ್ರರಾವ್ (೧೯೭೫), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೨. ಜೈನಧರ್ಮ : ವಿರ್ಜಿಅಣ್ಣಾರಾಯ (೧೯೬೯), ಡಿ.ವಿಕೆ.ಮೂರ್ತಿ, ಮೈಸೂರು ೫೭೦೦೦೪


ಚಾವುಂಡರಾಯನ ವಾಸ್ತು ಶಿಲ್ಪ ಸಾಧನೆ

ಜೈನಧರ್ಮೀಯರಿಗೆ ಎತ್ತರವಾದ ಸ್ಥಳಗಳೆಂದರೆ ಬಹು ಪವಿತ್ರ ಹಾಗೂ ಅಚ್ಚುಮೆಚ್ಚು. ಬೆಟ್ಟಗುಡ್ಡಗಳ ಮೇಲೆ ದೇಗುಲಗಳ ನಿರ್ಮಾಣ, ಗುಹೆಗಳಲ್ಲಿ ಮುನಿಗಳ ವಾಸ ಮತ್ತು ತಪೋಧ್ಯಾನ ಪ್ರಶಸ್ತವೆಂಬ ಭಾವನೆ. ಪಾರಮಾರ್ಥಿಕ ಪಥದಲ್ಲಿನ ದಿವ್ಯಸೋಪಾನವೆಂಬ ಅನನ್ಯತೆ. ನಿರ್ಜನ ಪ್ರದೇಶಗಳಲ್ಲಿನ ವಾಸ ಮನಃಕಷಾಯಗಳನ್ನು ದೂರೀಕರಿಸುವ ಸನ್ಮಾರ್ಗವೆಂಬ ಪ್ರತೀತಿ. ಅಂತೆಯೇ ಕರ್ನಾಟಕದ ಉದ್ದಗಲಕ್ಕೂ ಕಾಣಸಿಗುವ ಅಸಂಖ್ಯಾತ ಬಸದಿಗಳು, ಮೂರ್ತಿಶಿಲ್ಪಗಳು, ನಿಶಿಧಿ ಕಲ್ಲುಗಳು, ಮಾನಸ್ತಂಭಗಳು ಮತ್ತು ಬಲಿಪೀಠಗಳು ನಾಡಿನ ಜಾಗೃತಾವಸ್ಥೆಯ ಧವಳಪ್ರಾಯ ಸಂಗತಿಗಳಾಗಿ ಮೆರೆಯುತ್ತಿವೆ. ಸ್ಥಪತಿಗಳ ಕೈಚಳಕವು ಧರ್ಮ ಮತ್ತು ಕಲೆಯನ್ನು ಸಂಗಮಿಸಿದೆ, ಪ್ರಾದುರ್ಭಾವಗೊಳಿಸಿದೆ. ಆಳಿಅಳಿದ ರಾಜ ಮಹಾರಾಜರ, ಮಂತ್ರಿಮಾನ್ಯರ, ಅಧಿಕಾರಿಗಳ ಮತ್ತು ಜನಸಾಮಾನ್ಯರ ದೈವೀಕೈಂಕರ್ಯಕ್ಕೆ ಸಾಕ್ಷೀಭೂತವಾಗಿ ಹತ್ತಾರು ಶತಕಗಳು ಕಳೆದರೂ ಅಳಿಯದೆ ಉಳಿದಿವೆ. ಇಂತಹ ಅಲೌಕಿಕ ಧರ್ಮಾನುಯಾಯಿಗಳಲ್ಲಿ ಆಚಂದ್ರಾರ್ಕವಾಗಿ ಬೆಳಗುತ್ತಿರುವ ಜಿನಧರ್ಮಕುಲದೀಪಕನಾದ ಚಾವುಂಡರಾಯನ ಬದುಕು ತೇಜಃಪುಂಜವಾದ ಧರ್ಮವೃತ್ತಾಂತವಾಗಿದೆ. ಕಲಿಯೂ ಕವಿಯೂ ಆಗಿದ್ದ ಈತನ್ ಧರ್ಮಶ್ರದ್ಧೆ ಮತ್ತು ಅನುರಾಗದಿಂದೊಡಗೂಡಿದ ವ್ಯಕ್ತಿತ್ವವು ವಾಸ್ತುಶಿಲ್ಪ ಕಲಾ ಉಪಾಸನೆಯತ್ತಲೂ ಹರಿದುದು ಭುವನದ ಭಾಗ್ಯವಾಗಿದೆ. ತತ್ಪರಿಣಾಮವಾಗಿ ಇತಿಹಾಸದ ಪುಟಗಳಲ್ಲಿ ಬ್ರಹ್ಮಕ್ಷತ್ರ ಶಿಖಾಮಣಿ, ಗುಣರತ್ನ ಭೂಷಣ, ಭುಜ ವಿಕ್ರಮ, ಚಲದಂಕಗಂಗ, ಗಂಗರ ಭಟ, ಭಟಮಾರಿ ವೀರ ಮಾರ್ತಾಂಡ, ಸಮರ ಡುರಂಧರ, ಸಮರ ಪರುಶುರಾಮ, ಸುಭಟ ಚೂಡಾಮಣಿ, ಪ್ರತಿಪಕ್ಷ ರಾಕ್ಷಸ, ರಣರಂಗ ಸಿಂಗ, ವೈರಿಕುಲ ಕಾಲದಂಡ, ರಿಪುಕುಲ ಸಹಾಯಿ, ಸಂಧಿವಿಗ್ರಹಿ, ತ್ರಿಭುವನ ವೀರ, ಚಮೂಪತಿ, ಕವಿಜನಶೇಖರ, ಸಮ್ಯಕ್ತ್ವರತ್ನಾಕರ ಮತ್ತು ಸತ್ಯಯುಧಿಷ್ಠಿರ ಮುಂತಾದ ಬಿರುದು ಬಾವಲಿಗಳಿಂದ ರಾಯನುಲ ಲೋಕೋತ್ತರವಾಗಿ ಪ್ರಶಂಸಿಸಲ್ಪಟ್ಟಿರುವನು.

ಕರ್ನಾಟಕ ಪ್ರಖ್ಯಾತ ಪಶ್ಚಿಮ ಗಂಗಸಾಮ್ರಾಜ್ಯದ ದೊರೆ ೨ನೆಯ ಮಾರಸಿಂಹ ( ಕ್ರಿ.ಶ.೯೬೧-೯೭೪) ಮತ್ತು ೪ನೆಯ ರಾಚಮಲ್ಲ ( ಕ್ರಿ.ಶ.೯೭೪-೯೭೭) ಇವರು ಆಳ್ವಿಕೆಯಲ್ಲಿ ಸೇನಾಪತಿ ಮತ್ತು ಮುಖ್ಯಮಂತ್ರಿ ಸ್ಥಾನಗಳನ್ನು ಅಲಂಕರಿಸಿದ್ದ ಚಾವುಂಡರಾಯನು ಪ್ರಭುತ್ವದ ಅವಿಭಾಜ್ಯ ಅಂಗವಾಗಿದ್ದನು ಅಲ್ಲದೆ ಮಾರಸಿಂಹನ ಪೂರ್ವಾನುಯಾಯಿಯಾಗಿದ್ದ ಮರುಲದೇವ ( ಕ್ರಿ.ಶ.೯೫೩-೯೬೧) ಮತ್ತು ರಾಚಮಲ್ಲನ ಉತ್ತರಾಧಿಕಾರಿ ರಕ್ಕಸಗಂಗನ ಕಾಲದಲ್ಲಿಯೂ ರಾಯನು ಅಧಿಕಾರಸ್ಥನಾಗಿದ್ದನು. ಈತನ ತಂದೆ ಗೋವಿಂದಯ್ಯನ ಮಗನಾದ ಮಹಾಬಲಯ್ಯ, ತಾಯಿ ಕಾಳಲಾದೇವಿ ಮಡದಿ ಅಜಿತಾದೇವಿ ಮತ್ತು ಸಹೋದರಿ ಪುಲವ್ವೆ ಇವರು ಜಿನಧರ್ಮನಿಷ್ಠರಾಗಿದ್ದುರುಕೊಂಡು ಬಾಳಬಟ್ಟೆಯ ಪರಮಾಗಮವನ್ನು ಕಂಡುಕೊಂಡವರಾಗಿದ್ದರು. ಗುರುಪುಂಗವರಾದ ಅಜಿತಸೇನಾಚಾರ್ಯ ಮತ್ತು ನೇಮಿಚಂದ್ರಾಚಾರ್ಯರು ರಾಯನ ಬಾಳನ್ನು ಉದ್ದೀಪನಗೊಳಿಸಿದ್ದರು ಅಂತೆಯೇ ತನಗೆ ಸಂದ ರಾಜಕೀಯ ಮತ್ತು ಧಾರ್ಮಿಕ ಹಿನ್ನೆಲೆಯಿಂದಾಗಿ ನೆಲದ ಸಾಂಸ್ಕೃತಿಕ ಬದಕಿನ ಬುನಾದಿಗೆ ಕಾರಣೀಭೂತನಾದನು.

ಶಾಸನ ಮತ್ತು ಗ್ರಂಥಸಾಹಿತ್ಯದಲ್ಲಿ ಕಟವಪ್ರ, ಕಟಪ್ರ, ಕಟಪ್ರಗಿರಿ, ಕಟಪ್ಪ, ಕಟ್ಟಪ್ಪ, ಕಳ್ವಪ್ಪ. ಕಳ್ವಪ್ಪು, ಕಬ್ಬವ್ವ, ವೆಳ್ಗೊಳ, ಬೆಳ್ಗೊಳ, ಬೆಳ್ಗುಳನಗರ, ಜಿನಗಿರಿ, ರಿಷಿಗಿರಿ, ತೀರ್ಥಗಿರಿ, ಶ್ವೇತ ಸರೋವರ, ಧವಳತೀರ್ಥ, ಧವಳ ಸರಸ, ಧವಳ ಸರಸತೀರ್ಥ, ದೇವರ ಬೆಳ್ಗೊಳ ಮತ್ತು ಗೋಮಟ ಸ್ಥಳವು ಚಂದ್ರಗುಪ್ತ ಮತ್ತು ಭದ್ರಬಾಹುವಿನ ತರುವಾಯ ಚಾವುಂಡರಾಯನ ವಾಸ್ತುಶಿಲ್ಪ ಕೈಂಕರ್ಯದಿಂದ ನಿರಂತರವಾಗಿ ಬೆಳಗುತ್ತಿವೆ.

ಪ್ರತಿಮಾಯೋಗಿ ಶ್ರೀ ಗೋಮಟೇಶ್ವರ

ದೊಡ್ಡಬೆಟ್ಟ ( ಪೆರ್ಗಳ್ವಪ್ಪು)ದ ಮೇಲೆ ನಿಂತಿರುವ ಜಗತ್ತಿನ ಮಹದಾಕರ್ಷಕ ಮೇರು ಶಿಲ್ಪಕೃತಿಗಳಲ್ಲಿಂದಾದ ಕೃತಯುಗದ ಕಾಮ್ಮಧೇನು ತ್ಯಾಗಮೂರ್ತಿ ಗೋಮಟೇಶ್ವರನ ಪ್ರತಿಷ್ಠಾಪನೆ ಕುರಿತಂತೆ ನಾನಾ ಕಾವ್ಯಾ ಧಾರಗಳು ಸಿಗುತ್ತವೆ. ಬೊಪ್ಪಣ ಪಂಡಿತನ ' ಗೊಮ್ಮಟ ಸ್ತುತಿ' ( ಕ್ರಿ.ಶ.೧೮೮೦) ಯ ಲಗಾಯ್ತು ಹತ್ತಾರು ಕವಿಗಳು ಗೊಮ್ಮಟನನ್ನು ಹಾಡಿ ಕೊಂಡಾಡಿದ್ದಾರೆ. ಪಿರಿಯಾಪಟ್ಟಣದ ದೊಡ್ಡಯ್ಯನ ' ಭುಜಬಲಿ ಶತಕ' ( ಕ್ರಿ.ಶ.೧೫೫೮) ಮತ್ತು ಪಂಚಬಾಣನ 'ಭುಜಬಲಿ ಚರಿತೆ' ( ಕ್ರಿ.ಶ.೧೬೧೪) ಕೃತಿಗಳು ಗೊಮ್ಮಟ ಸ್ಥಾಪನೆಯನ್ನು ಕುರಿತು ಉಲ್ಲೇಖಿಸುವವು. ಚಿದಾನಂದ ಕವಿಯು 'ಮುನಿವಂಶಾಭ್ಯುದಯ' ( ೧೭ನೆಯ ಶತಮಾನ ) ಗೊಮ್ಮಟ ಮೂರ್ತಿಯನ್ನು ರಾಮ ಸೀಟೆಯರು ಲಂಕೆಯಿಂದ ಒಯ್ದು ತಂದರೆಂದರೆ, ದೇವಚಂದ್ರನ ' ರಾಜಾವಳೀ ಕಥೆ ' ( ಕೀ.ಶ.೧೮೪೧) ಯ ರೀತ್ಯ ರಾಮ, ರಾವಣ ಮತ್ತು ಮಡೋದರಿಯರು ಕಟವಪ್ರಕ್ಕೆ ಕಲ್ಪನೆಯ್ ಸಂಗತಿಗಳನ್ನು ಉಲ್ಲೇಖಿಸಲಾಗಿದೆ. ಹಾಸನದ ಅನಂತಕವಿಯು ತನ್ನ 'ಗೋಮಟೇಶ್ವರ

ಚರಿತೆ' (ಕ್ರಿ.ಶ.೧೮೮೯) ಗ್ರಂಥವು ಭರತ ಬಾಹುಬಲಿ ಕಾಳಗದ ಧೀರ ವೃತ್ತಾಂತವನ್ನು ಹೃದಯಂಗಮವಾಗಿಸಿದೆ.

ಚಾವುಂಡರಾಯ ವಿರಚಿತ ತ್ರಿಷಷ್ಠಿ ಲಕ್ಷಣ ಮಹಾಪುರಾಣ (ಕ್ರಿ.ಶ.೯೭೮) ದಲ್ಲಿ ಮೂರ್ತಿಯ ಪ್ರತಿಷ್ಠಾಪನೆ ಕುರಿತಂತ ಯಾವುದೇ ಪ್ರಸ್ತಾಪವಿಲ್ಲ. ಆದರೆ ಯತಿವರ್ಯ ಸಿದ್ಧಾಂತ ಚಕ್ರವರ್ತಿ ಶ್ರೀ ನೇಮಿಚಂದ್ರಾಚಾರ್ಯ ವಿರಚಿತ ಪ್ರಾಕೃತಗ್ರಂಥ 'ಗೊಮ್ಮಟಸಾರ'ದಲ್ಲಿ ಮಹಾಮಂತ್ರಿ ಚಾವುಂಡರಾಯನೇ ಬೆಳ್ಗೊಳದ ಗೊಮ್ಮಟನನ್ನು ಕಂಡರಿಸಿದನೆಂಬುದಾಗಿ ನಿರ್ದಿಷ್ಟವಾಗಿ ಉಲ್ಲೇಖಿಸಲಾಗಿದೆ. ರಾಷ್ಟ್ರಕವಿ ಗೋವಿಂದಪೈಗಳ ಸಂಶೋಧನಾಧ್ಯಯನ ರೀತ್ಯ ಗೋಮ್ಮಟನನ್ನು ೧೪ ಮಾರ್ಚ್ ೯೮೧ ರ ಸೋಮವಾರ ಬೆಳಗಿನಜಾವದಲ್ಲಿ ಪ್ರತಿಷ್ಠಾಪನೆಗೈಯಲಾಯಿತು.

ಭರತ ಚಕ್ರವರ್ತಿಯು ಬಲುದೂರದ ತಾಣವಾದ ಪೌದನಪುರದಲ್ಲಿ ನೆಲೆಸಿದ್ದ ೫೨೫ ಬಿಲ್ಲುಗಳ ಪ್ರಮಾಣದೆತ್ತರದ ಭಗವಾನ್ ಬಾಹುಬಲಿಸ್ವಾಮಿ (ಕುಕ್ಕುಟ ಜಿನ) ದರ್ಶನಭಾಗ್ಯ ಪಡೆಯುವ ಹೆಬ್ಬಯಕೆಯನ್ನು ತಾಯಿ ಕಾಳಲಾದೇವಿಯು ಚಾವುಂಡರಾಯನಲ್ಲಿ ಅರಿಕೆ ಮಾಡಿಕೊಂಡಳಷ್ಟೆ. ಆದರೆ ದುರ್ಗಮವಾದ ಗಿರಿಕಂದರ ಕಾನನಗಳಲ್ಲಿ ನೆಲೆಸಿದ್ದ ಸ್ವಾಮಿಯನ್ನು ದರ್ಶಿಸುವುದು ಅಸಾಧ್ಯವೆಂದರಿತ ರಾಯನು ಯಕ್ಷಿ ಪದ್ಮಾವತಿ ದೇವಿಯ ಆಣತಿಯಂತೆ ಸಮೀಪದ ಬೆಳ್ಗೊಳದಲ್ಲಿಯೇ ಬಂಡೆಗಳನ್ನು ಖಂಡರಿಸಿ ನೆಲೆಗೊಳಿಸಲು ಉದ್ಯುಕ್ತನಾದನು. ಮಹಾಶಿಲ್ಪಿ ಅರಿಷ್ಠನೇಮಿ (ಅರಿಟ್ಟೋನೇಮಿ/ ಭರತೋಜ)ಯೂ ತನ್ನ ಪರಿವಾರದೊಂದಿಗೆ ರಾಯನ ಅಭೀಪ್ಸೆಯನ್ನು ಪೂರೈಸಿದನು.

ಸ್ಥಳದಲ್ಲಿಯೇ ಇದ್ದ ಕಗ್ಗಲ್ಲಿನಲ್ಲಿ ಕೆತ್ತಲ್ಪಟ್ಟಿರುವ ಪ್ರತಿಮಾಯೋಗಿ ಬಾಹುಬಲಿಯ ಶಿಲ್ಪ ಇತ್ತೀಚಿನ ಥಿಯೋಡಲೈಟ್ ಉಪಕರಣದ ನೆರವಿನ ಮಾಪನ ರೀತ್ಯ ೫೮'-೮'' ಗಳೆತ್ತರವಿದೆ. ಬಿರಿದ ಕಮಲಪುಷ್ಪದ ಮೇಲೆ ಕಾಯೋತ್ಸರ್ಗದಲ್ಲಿ ನಿಂತು ತಪಗೈಯ್ಯುತ್ತಿರುವ ಯೋಗಿಯ ಮಂಡಿಯವರೆಗೆ ಬೆಳೆದ ಹುತ್ತಗಳು, ಅವುಗಳಿಂದ ಹೊರಚಾಚಿದ ಘಟಸರ್ಪಗಳು, ಬಲಿಷ್ಟ ತೊಡೆಗಳು ಮತ್ತು ನಿಡುದೋಳುಗಳನ್ನು ಬಳಸಿ ಭುಜದವರೆಗೆ ಹಬ್ಬಿರುವ ಮಾಧವಿಲತೆ, ಹರವಾದ ವಕ್ಷಸ್ಥಳ್, ಧೀರ ಗಂಭೀರ ಮುಖಮುದ್ರೆ, ಟಿದ್ದಿ ತೀಡಿದ ಗಲ್ಲ, ನಾಸಿಕ, ಕದಪುಗಳು, ಮುಂದುಟಿಗಳು, ಕಣ್ಣುಗಳು, ಹುಬ್ಬುಗಳು, ವಿಶಾಲವಾದ ನೊಸಲು, ಕಿವಿಗಳು, ಗುಂಗುರು ಗುಂಗುರಾದ ಕೂದಲುಗಳು ಮತ್ತು ಮಹಾಸಂಯಮಿಯ ಮಂದಹಾಸ ನೋಟಕರನ್ನು ಕೆಲಕಾಲ ಮಂತ್ರ ಮುಗ್ಧಗೊಳಿಸುತ್ತವೆ, ಕಾಮದೇವನ್ ಡಿಗಂಬರತ್ವದ ಸೌಂದರ್ಯವು ಸಾಕಾರ ಗೊಂಡಿದೆ.

ಖಡ್ಗಾಸನಿಯ ಇಕ್ಕೆಲಗಳಲ್ಲಿರುವ ಶಾಸನಗಳು ಬಹಳ ಮಹತ್ವ ಪೂರ್ಣದ್ದಾಗಿವೆ. ಪೂಜ್ಯ ಪಾದಯುಗ್ಮಗಳ ಬಲಭಾಗದ ಹುತ್ತಗಳ ಮೇಲೆ ' ಚಾಮುಣ್ಣ ರಾಜಂ ಮಾಡಿಸಿದಂ' ( ಕನ್ನಡ) , ಶ್ರೀ ಚಾಮುಣ್ಡ ರಾಜಂ ಶೆಯ್ವಿತ್ತಾನ್ ( ತಮಿಳು) ಮತ್ತು ಎಡಭಾಗದಲ್ಲಿ ಚಾಮುಣ್ಡರಾಜೇಂ ಕರವಿಯಲೇಂ' ( ಮರಾಠಿ) ಎಂದಿದೆ. ಈ ಮರಾಠಿ ಶಾಸನವು ಇಲ್ಲಿಯವರೆಗೆ ಉಪಲಬ್ಧವಿರುವ ಅತ್ಯಂತ ಪುರಾತನ ಶಾಸನಗಳಲ್ಲೊಂದು ಎನ್ನಲಾಗಿದೆ. ಅಲ್ಲದೆ ಗಂಗರಾಜನು ನಿರ್ಮಿಸಿದ ಸುತ್ತಾಲಯದ ಉಲ್ಲೇಖವೂ ಇಲ್ಲಿದೆ.

ಶ್ರೀ ತ್ಯಾಗದ ಬ್ರಹ್ಮದೇವರ ಕಂಭ

ಶ್ರವಣಬೆಳಗೊಳದ ಐತಿಹಾಸಿಕ ನಿರ್ಮಿತಿಗಳಲ್ಲೊಂದಾದ ೧೦ ನೆಯ ಶತಮಾನದ ತ್ಯಾಗದ ಬ್ರಹ್ಮದೇವರ ಸ್ತಂಭವನ್ನು ಶ್ರೀ ಚಾವುಂಡರಾಯನೇ ನಿರ್ಮಿಸಿದನೆಂದು ಇಲ್ಲವೆ ರಾಯನ ಸ್ಮರಣಾರ್ಥವಾಗಿ ನಿಲ್ಲಿಸಲ್ಪಟ್ಟಿದೆ ಎಂದು ತಿಳಿಯಲಾಗಿದೆ. ಇದು ಚಂದ್ರಗಿರಿಯ ಕೂಗೆ ಬ್ರಹ್ಮದೇವನ ಸ್ತಂಭವನ್ನು ಹೋಲುತ್ತದೆ. ಸುಮಾರು ೧೦ ಅಡಿಗಳೆತ್ತರದ ಸ್ತಂಭವು ಕಲಾಮಯವಾದ ಲತಾಪುಷ್ಪಗಳ ಸುರುಳಿಗಳಿಂದಾವೃತವಾದ ದುಂಡು ಶಿರಭಾಗವನ್ನು ಹೊಂದಿದೆ. ಚಚ್ಚೌಕಾಕಾರದ ಕೆಳಭಾಗದ ಪಾರ್ಶ್ವವೊಂದರಲ್ಲಿ ಚೌರಿಧಾರಿಗಳೊಡನಿರುವ ಶ್ರೀ ಚಾವುಂಡರಾಯ ಮತ್ತು ಆತನ ಗುರು ನೇಮಿಚಂದ್ರಾಚಾರ್ಯರ ಉಬ್ಬು ಕೆತ್ತನೆಗಳಿವೆ. ಉತ್ತರ ಭಾಗದಲ್ಲಿ ರಾಯನ ಕ್ಷಾತ್ರ ತೇಜಸ್ಸು ಮತ್ತು ಸಾಧನೆಗಳನ್ನು ವರ್ಣಿಸುವ ಲಿಪಿಯಿದೆ. ಹೊಯ್ಸಳರ ಕಾಲದಲ್ಲಿ ಹೆಗ್ಗಡೆ ಕಣ್ಣ ( ಕ್ರಿ.ಶ.೧೨೦೦) ನೆಂಬುವನ್ನು ಪಿಕ್ಕಭಾಗದಲ್ಲಿನ ಶಾಸನವನ್ನು ಅಳಿಸಿ ಹಾಕಿ ತನ್ನ ಸಂಗತಿಯನ್ನು ಕೆತ್ತಿಸಿದನೆನ್ನಲಾಗಿದೆ. ಇತ್ತೀಚಿನವರೆಗೆ ಸ್ತಂಭವು ಸಂಪೂರ್ಣ ತಲಸ್ಪರ್ಶ ಗೊಳ್ಳುವಂತಿದ್ದು ಕರವಸ್ತ್ರವನ್ನು ಕೆಳಭಾಗದಲ್ಲಿ ಸಲೀಸಾಗಿ ಒಂದೆಡೆಯಿಂದ ಇನ್ನೊಂದೆಡೆಗೆ ಜರುಗಿಸಬಹುದಾಗಿದ್ದಿತು.

ಕೊಡುಗೈದೊರೆ ಚಾವುಂಡರಾಯನ ಈ ಸ್ಥಳದಲ್ಲಿ ನಿಂತು ' ಭಗವಂತನಲ್ಲಿ ಬಂಗಾರವನ್ನು ಕಂಡ' ರೂವಾರಿಗಳಿಗೆ ಕಾಯಕದ ಕಲ್ಲುರಾಶಿಗೆ ಸಮತೂಕವಾಗಿ ಕಾಣಿಕೆಯನ್ನು ಮತ್ತು ಬಡಬಗ್ಗರಿಗೆ ಉದಾರವಾಗಿ ದಾನವನ್ನು ನೀಡುತ್ತಿದ್ದನಂತೆ,

ಅಖಂಡ ಬಾಗಿಲು

ಅಖಂಡ ಬಾಗಿಲು ಎಂದು ಕರೆಯಲ್ಪಟ್ಟಿರುವ ಮಹಾದ್ವಾರದ ಲಲಾಟದಲ್ಲಿರುವ ಗಜಲಕ್ಷ್ಮೀ ಪಟ್ಟಿಕೆಯನ್ನು ರಾಯನೇ ನಿರ್ಮಿಸಿದನು. ಪಟ್ಟಿಕೆಯು ಗಂಗ ವಾಸ್ತುಶಿಲ್ಪ ವೈಭವದ ಉತ್ತನ ಉದಾಹರಣೆಯಾಗಿದೆ. ಪದ್ಮಾಸೀನ ಕಿರೀಟಧಾರಿ ಲಕ್ಷ್ಮೀದೇವಿಯು ಎರಡು ಹಸ್ತಗಳಲ್ಲಿ ಪದ್ಮಪುಷ್ಪಗಳಿವೆ.

ಇಬ್ಬದಿಯಲ್ಲಿ ಗಜಗಳೂ ಸೊಂಡಲಿನಲ್ಲಿ ಕುಂಭಗಳನ್ನಿಡಿದು ಲಭಿಷೇಕವನ್ನು ನಿರ್ವಹಿಸುತ್ತಿರುವುವು. ಅಲ್ಲದೆ ಮಕರದ ದವಡೆಗಳಲ್ಲಿರುಅವ ಸಿಹಾ ಗಳು ಅರ್ಚನೆಗೈಯುತ್ತಿವೆ.

ಇಂದ್ರಗಿರಿಯ ಮತ್ತಿತರ ವಾಸ್ತುಶಿಲ್ಪ ರಚನೆಯಲ್ಲಿಯೂ ಶ್ರೀ ಚಾವುಂಡರಾಯನ ಕೊಡುಗೆಯನ್ನು ಗಮನಿಸಬಹುದು. ಶ್ರೀ ಗೋಮಟೇಶ್ವರ ಮಹಾಸ್ವಾಮಿಯ ಎದುರಿಗಿರುವ ಶ್ರೀ ಕೂಷ್ಮಾಂಡಿನೀ ದೇವಿಯು ರೂಪಳಾದ ಗುಳ್ಳೆ ಕಾಯಜ್ಜಿ ಪ್ರತಿಮೆ, ಭದ್ರಶಾಲೆ, ಪಾತಾಳಗಂಬ, ಯಕ್ಷಗಂಬ , ಭಿತ್ತಿ ಮತ್ತು ಮೆಟ್ಟಲುಗಳನ್ನು ರಾಯನೇ ನಿರ್ಮಿಸಿದನೆಂಬ ಪ್ರತೀತಿಯಿದೆ.

ಶ್ರೀ ಚಾವುಂಡರಾಯ ಬಸದಿ

ಚಿಕ್ಕಬೆಟ್ಟದ ಮೆಲೆ ಬ್ರಹ್ಮ ಕಲಹೋತ್ಪನ್ನ ಶ್ರೀ ಚಾವುಂಡರಾಯನು ಕ್ರಿ.ಶ.೯೮೨-೮೩ ರಲ್ಲಿ ತನ್ನ ಮನೆದೇವರಾದ ೨೨ನೆಯ ತೀರ್ಥಂಕರ ಶ್ರೀ ನೇಮಿನಾಥ ಸ್ವಾಮಿಯ ಅಂಕಿತದಲ್ಲಿ ಕಟ್ಟಿಸಿರುವ ದೇಗುಲವು ವಿಶಿಷ್ಟ ವಾಸ್ತುಶಿಲ್ಪ ಕಲಾಸೊಬಗಿನಿಂದ ಕೂಡಿದೆ. ಬೆಟ್ಟದಲ್ಲಿನ ೧೪ ಜಿನಾಲಯಗಳಲ್ಲಿ ಬೃಹತ್ತಾದ ಈ ಕಟ್ಟಡವು ಬಹುವಾಗಿ ಪಲ್ಲವ ಶೈಲಿಯನ್ನುಹೋಲುತ್ತದೆ ಯೆನ್ನಲಾಗಿದೆ. ಗಂಗಶೈಲಿಯ ನಿರ್ಮಾಣವೆಂಬ ಪರಿಗಣಿಸಿರುವ ಬಸದಿಯ ಮುಖ್ಯದ್ವಾರದ ಹೊರೆ ಪಾರ್ಶ್ವಗೋಡೆಯ ಬಳಿಯ ಅಧಿಷ್ಠಾನ ಪಟ್ಟಿಕೆಯಲ್ಲಿ ೧೧-೧೨ ನೆಯ ಶತಮಾನದಲ್ಲಿ ರಾಯನಿಂದ ನಿರ್ಮಿಸಲ್ಪಟ್ಟಿರಬಹುದಾಗಿದ್ದಎರೂ ತದನಂತರ ಕಟ್ಟಡಕ್ಕೆ ಇನ್ನಿತರ ಭಾಗಗಳನ್ನು ಅಳವಡಿಸಿ ಜೀರ್ಣೋದ್ಧಾರವನ್ನು ಕೈಗೊಂಡಾಗ ರಾಯನ ಹೆಸರನ್ನು ಕೆತ್ತಲಾಗಿದೆಯೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿರುಅವರು. ಹೊಯ್ಸಳ ಶಾಸನಗಳಲ್ಲಿ ಶಾಸನಗಳಲ್ಲಿ ಇದನ್ನು ' ತ್ರೈಲೋಕ್ಯರಂಜನ' ಮತ್ತು 'ಬೊಪ್ಪ ಜಿನಾಲಯ'ವೆಂದು ಕರೆಯಲಾಗಿದೆ.

ಎರಡು ಗರ್ಭಗೃಹಗಳಿಂದ ದೇಗುಲವು ಮುಖಮಟಪ, ಸರಳ ವಿನ್ಯಾಸದ ಕಂಭಗಳಿಂದ ಕೂಡಿದ ನವರಂಗ ಮತ್ತು ಸುಖನಾಸಿಯನ್ನೊಂದಿದೆ. ಸರಳ ಭಿತ್ತಿಗಳಿಂದ ಸುತ್ತುವರಿಯಲ್ಪಟ್ಟಿದ್ದರೂಹಾರದಲ್ಲಿ ಮೂರು ಪಟ್ಟಿಕೆಗಳು ಕಲಾತ್ಮಕ ಕೆತ್ತನೆಗಳಿಂದ ಕೂಡಿವೆ. ಕೆಳಪಟ್ಟಿಕೆಯಲ್ಲಿ ಗೂಡು-ಕಮಾನುಗಳು, ನಡುವಿನ ಚಿಕ್ಕ ಪಟ್ಟಿಕೆಯಲ್ಲಿ ಜೋಡಿಹಾಗೂ ಪರಸ್ಪರ ಅಭಿಮುಖವಾಗಿರುವ ಯಾಳಿಗಳು ಮತ್ತು ಮೇಲ್ಪಟ್ಟಿಕೆಯಲ್ಲಿ ತುಸು ದೊಡ್ಡಪ್ರಮಾಣದ ಗೂಡು-ಕಮಾನುಗಳುಹಾಗೂ ಧ್ಯಾನಾಸಕ್ತ ತೀರ್ಥಂಕರ ಮೂರುತಿಗಳಿವೆ. ಕೆಳ ಅಂತಸ್ತಿನ ಗರ್ಭಗುಡಿಯಲ್ಲಿ ೫ ಅಡಿಗಳೆತ್ತರದ ಚಾಮರಧಾರಿಗಳೊಡನೆ ಪದ್ಮಾಸನಿ ನೇಮಿನಾಥ ತೀರ್ಥಂಕರನ ವಿಗ್ರಹವಿದೆ. ಇದರ ಸಿಹಾಪೀಠದ ಮೇಲೆ ಕ್ರಿ.ಶ.೧೧೩೮ ರ ಶಿಲಾಲೇಖದ ರೀತ್ಯ ವಿಗ್ರಹವು ಹೊಯ್ಸಳ ಅರಸು ವಿಷ್ಣುವರ್ಧನನ ಸೇನಾನಿ ಮತ್ತು ಮಂತ್ರಿ ಗಂಗರಾಜನ ಮಗನಾದ ಏಚಣನಿಂದ ಪ್ರತಿಷ್ಠಾಪಿಸಲ್ಪಟ್ಟುದಾಗಿ

ತಿಳಿದುಬರುತ್ತದೆ. ಈತನು ಬೊಪ್ಪಣ ಚೈತ್ರಾಲಯ ( ತ್ರೈಲೋಕ್ಯರಂಜನ) ವನ್ನು ನಿರ್ಮಿಸಿದನು. ಹೊಯ್ಸಳಾಚಾರಿಯ ಮಗನಾದ ' ಬಿರುದರೂವಾರಿಗಳ ಮುಖತಿಳಕ' ಬಿರುದಾಂಕಿತ ಗಂಗಾಚಾರಿ ( ವರ್ಧಮಾನಾಚಾರಿ ) ಯಿಂದ ವಿಗ್ರಹವು ಕೆತ್ತಲ್ಪಟ್ಟಿದೆ. ಆದರೆ ಬಸದಿಯ ಗೋಡೆಯಲ್ಲಿ ಶ್ರೀ ಚಾಮುಣ್ಡರಾಜಂ ಮಾಡಿಸಿದಂತಿದೆ. ಅಂತೆಯೇ ಗರ್ಭಗುಡಿಯ ಮೂಲ ವಿಗ್ರಹವು ಕಾಲಾಂತರದಲ್ಲಿ ಹೊಯ್ಸಳ ವಿಗ್ರಹದೊಂದಿಗೆ ಬದಲಾಗಿದಂತೆ ಕಂಡುಬರುತ್ತದೆ. ಅಂತರಾಳ ದಲ್ಲಿರುವ ನೇಮಿನಾಥ ತೀರ್ಥಂಕರನ ಯಕ್ಷ ಯಕ್ಷಿಯರಾದ ಆಸೀನ ಸರ್ವಾಹ್ಣ ಮತ್ತು ಕೂಷ್ಮಾಂಡಿನೀ ವಿಗ್ರಹಗಳನ್ನು ಗಂಗಾಚಾರಿಯೇ ಕಡೆದನೆನ್ನಲಾಗಿದೆ.

ಮೇಲುಪ್ಪರಿಗೆಯ ಜಿನಾಲಯ ಭಾಗವನ್ನು ಕ್ರಿ.ಶ.೯೯೫ ರಲ್ಲಿ ಚಾವುಂಡ ರಾಯನ ಮಗ ಜಿನದೇವಣ್ಣನು. ಕಟ್ಟಿಸಿದನು. ಈ ಬಸದಿಯಲ್ಲಿ ' ಜಿನಗೃಹಮಂ ಬೆಳ್ಗೊಳದೊಳ್ ಜನಮಲ್ಲಂ ಪೊಗಳೆ, ಚಾಮುಂಡನ ನಂದನನೊಲವಿ ಮಾಡಿಸಿದಂ ಜಿನದೇವಣಜಿತಸೇನ ಮುನಿಪರಗುಡ್ಡಂ' ಎಂಬ ಪಾಠದ ಶಿಖರವು ಮನಸೆಳೆಯುತ್ತದೆ. ಗರ್ಭಗುಡಿಯಲ್ಲಿ ೩ ಅಡಿಗಳೆತ್ತರದ್ ಶ್ರೀ ಪಾರ್ಶ್ವನಾಥ ತೀರ್ಥಂಜರನು ವಿರಾಜಿಸಿರುವನು. ತಂದೆ ಮತ್ತು ಮಗನು ಧಾರ್ಮಿಕ ಆಚರಣೆಯ ದ್ಯೋತಕವಾಗಿ ನಿರ್ಮಾಣಗೊಂಡ ಏಕ ಜಿನಾಲಯವು ಬಹುಶಃ ಇದೊಂದೇ ಎಂದರೆ ಅತಿಶಯೋಕ್ತಿಯಾಗಲಾರದು.

ಇವುಗಳಲ್ಲದೆ ದೆಳಪತಿ ಚಾವುಂದರಾಯನ್ ಕುರಿತಂತೆ ಮತ್ತೆ ಕೆಲವು ಸ್ಥಳಗಳನ್ನು ಎರಡೂ ಬೆಟ್ಟಗಳಲ್ಲಿ ಗುರುತಿಸಲಾಗಿದೆ. ವಿದ್ಯಗಿರಿಯ ಗೋಮಟೇಶ್ವರ ವಿಗ್ರಹದತ್ತ ಸಾಗುವಾಗಿನ ಮೆಟ್ಟಿಲುಗಳ ಬಳಿಯ ಕಂಭವೊಂದರ ಮೇಲಿನ ಕುದುರೆ ಸವಾರನ ಉಬ್ಬಚಿತ್ರವು ಚಾವುಂಡರಾಯನದೆಂದು ಭಾವಿಸಲಾಗಿದೆ. ಚಂದ್ರಗಿರಿಯಲ್ಲಿನ ಬಂಡೆಯ ಮೇಲಿನ ಪಾದಗಳ್ ಮುದ್ರೆಯನ್ನು ಚಾವುಂಡರಾಯನ ಕಲ್ಲು ಎಂದು ಕರೆಯುವರು. ರಾಯನು ಇತ್ತಣಿಂದಲೇ ಎದುರಿನ ಇಂದ್ರಗಿರಿಯ ಕೋಡುಗಲ್ಲಿನತ್ತ ಬಾಣ ಪ್ರಯೋಗ ಮಾಡಿ ಬಾಹುಬಲಿಯ ದರ್ಶನಭಾಗ್ಯವನ್ನು ಕಂಡನೆಂಬ ನಂಬುಗೆಯಿದೆ.

ಧರ್ಮಭಿಕ್ಷು ಶ್ರೀ ಚಾವುಂಡರಾಯನ ಅನನ್ಯ ಮಾತೃಭಕ್ತಿ, ಭಗವದಾರಾಧನೆ ಮತ್ತು ಕಲಾಪ್ರೇಮವು ಕರುನಾಡಿನ ಧಾರ್ಮಿಕ ಚಿಂತನ ಪರಿಧಿಯಲ್ಲಿ ಚಿರಂತನವಾಗಿದೆ.

ಧರ್ಮಶಾಸ್ತ್ರ ದ ಸಲಿಹಿಡು ಏಚಿಗನಹುಳ್ಳಿ

ಶ್ರೀಮತೇ ನೇಮಿನಾಥಾಯ ನಮಃ ಸ್ಯಾದ್ವಾದಸಿಂಧವೇ ।

ಯಸ್ಮಿನ್ನುದಿತ ಬೋಧೇಂದೌತ್ರೈಲೋಕ್ಯಂ ಲಕ್ಷಣಾಯತೇ ॥

ಮೈಸೂರು–ನಂಜನಗೂಡು ಮಾರ್ಗದಲ್ಲಿರುವ ತಾಂಡವಪುರದ ಪಶ್ಚಿಮಕ್ಕೆ ಹಾದುಹೋಗುವ ಪ್ರವೇಶವು ಏಚಗನಹಳ್ಳಿಗೆ ಕೊಂಡೊಯ್ಯುತ್ತದೆ. ಮೈಸೂರಿನ ರಾಜವಂಶದಲ್ಲಿ ಮಹಾನ್ ಕೀರ್ತಿಶಾಲಿಗಳಾದ' ನವಕೋಟಿ ನಾರಾಯಣ ' ಎಂದು ಬಿರುದಾಂಕಿತರಾಗಿದ್ದ ಶ್ರೀ ಚಿಕ್ಕದೇವ ಮಹಾರಾಜ ಒಡೆಯರ್ ಏಚಗನಹಳ್ಳಿ ಗ್ರಾಮವನ್ನು ಯಳಂದೂರಿನ ದೊಡ್ಡಪಂಡಿತ ( ವಿಶಾಲಾಕ್ಷ ಪಂಡಿತ ) ನಿಗೆ ಬಳುವಳಿಯಾಗಿ ಕೊಟ್ಟರು. ಈ ಸಂಗತಿಯನ್ನು ಮಾರಿಚಾವಡಿ ಬಳಿಯಿರುವ ಕಲ್ಲಿನಲ್ಲಿ ತಿಳಿಸಲಾಗಿದ್ದು ಇದರ ಕಾಲ ೧೬೦೬ ನೆಯ ಶಕ ವರ್ಷದ ರಕ್ತಾಕ್ಷಿ, ಪುಷ್ಯ ಬಹುಳ ೩೦ ಅಂದರೆ ೨೪ ರ ಜನವರಿ ೧೬೮೫ ನೆಯ ಇಸವಿ ಎಂದು ತಿಳಿಯಲಾಗಿದೆ. ವಿಶಾಲಾಕ್ಷ ಪಂಡಿತನು ಚಿಕ್ಕದೇವರಾಯರ ಸಹಪಾಠಿಯಾಗಿ ಕಾಲಕ್ರಮದಲ್ಲಿ ಅವರ ಮಂತ್ರಿಯೂ ಆಗಿದ್ದನು. ಈ ಜಹಗೀರಿನ ಅವಧಿಯಲ್ಲಿ ಗ್ರಾಮವು ಧಾರ್ಮಿಕ ಮತ್ತು ಸಾಮಾಜಿಕ ರಂಗಗಳಲ್ಲಿ ಪ್ರಗತಿಯನ್ನು ಕಂಡುದಾಗಿಯೂ ತಿಳಿದುಬರುತ್ತದೆ. ' ಏಚಿಗ' ಅನ್ನುವ ಪದವು 'ಯಕ್ಷಿಗ' ಎಂಬ ಮೂಲ ಪದದ ಬದಲಾದ ರೂಪ ಎನ್ನಲಾಗಿದೆ. ಅಲ್ಲದೆ ಪ್ರಾದಿತ್ಯ ಪದದ ಮೂಲ ವಿದ್ದಿರಬಹುದಾಗಿದೆ. ಯಾಚಗೌಡನಹಳ್ಳಿ ಎಂಬುದು ಕಾಲಕ್ರಮೇಣ ಏಚಗನಹಳ್ಳಿಯೆಂದಾಗಿರಬಹುದು.ಹತ್ತಿರದಲ್ಲಿಯೇ ಇದೇಹೆಸರಿನ ಇನ್ನೊಂದುಹಳ್ಳಿಯಿದೆ.

ಕಪಿಲಾನದಿಯ ಎಡದಂಡೆಗೆ ಹೊಂದಿಕೊಂಡಂತಿರುವ ಶ್ರೀನೇಮಿನಾಥ ಬಸದಿಯು ಗ್ರಾಮದ್ ಪ್ರಮುಖ ಆಕರ್ಷಣೆಯಾಗಿದೆ. ಮಂದಿರದಲ್ಲಿ ಮೂಲ ತೀರ್ಥಂಕರ ನೇಮೀಶ್ವರನಲ್ಲದೆ ಅದರ ಬಲ–ಎಡ ಭಾಗಗಳಲ್ಲಿ ಕ್ರಮವಾಗಿ ಕಾಯೋತ್ಸರ್ಗದಲ್ಲಿರುವ ವಿಗ್ರಹಗಳಾದ ಶ್ರೀ ಪಾರ್ಶ್ವನಾಥ ಮತ್ತು ಶ್ರೀ ಸುಪಾರೀಶ್ವನಾಥ ತೀರ್ಥಂಕರ ರಿರುವರು. ಇಲ್ಲಿನ ಯಕ್ಷ ಕೂಗುಬ್ರಹ್ಮದೇವನು ಬಹುಪ್ರಸಿದ್ಧನು.

ಬಸದಿಯ ಉತ್ತರ ಭಾಗದ ಮಂಟಪ ಮಾರ್ಗದಲ್ಲಿ ಡೊರೆತಿರುವ ಶಾಸನದ ರೀತ್ಯ ಕೇತಗೊಂಡನ ಮಗ ಮದ್ದಗೊಂಡ ಗುರು ಮೇಘಚಂದ್ರ ದೇವನೆಂಬುವನು ಶಿಷ್ಯನಾಗಿದ್ದ ಮಾಣಿಕ ದೇವರು ಎಂಬುವನು ಬಸದಿಯನ್ನು ಸ್ಥಾಪಿಸಿದನೆಂದು ಹೇಳಲಾಗಿದೆ. ಗುರುವು ಮುಕ್ತಿಪಡೆದ ಕಾಲವು ೧೨೯೩ ನೆಯ ಶಕವರ್ಷದ ವಿರೋಧಿಕೃತ, ಮಾಗಶಿರ ಶುದ್ಧ ೧೫ ಅಂದರೆ ಭಾನುವಾರ ೨೩ನೆಯ ನವೆಂಬರ್ ೧೩೭೧ ಎಂದಾಗುತ್ತದೆ. ನಾಡಿನ ಹಿರಿಯ ಜೈನ ಇತಿಹಾಸ ಮತ್ತು ಶಾಸನಶಾಸ್ತ್ರ ಪಂಡಿತರಾದ ಶ್ರೀ ಜಿ.ಜಿ. ಮಂಜುನಾಥನ್ ಅವರು ಪರಿಷ್ಕರಿಸಿದ ಶಾಸನದಲ್ಲಿನ ಗುರುಸ್ತುತಿ ಪಾಠವು ಇಂತಿದೆ:

ಶ್ರೀ ಮತ್ಪರಮ ಗಂಭೀರ ಸ್ಯಾದ್ವಾದಮೋಘಲಾಂಛ
ನಂಜೀಯಾತ್ತ್ರೈಲೋಕನಾಥಸ್ಯ ಶಾಸನಂ ಜಿನಶಾ
ಸನಂ ॥ ಧೀರರಪಾರ ಸದ್ಗುಣಮಣಿ ಬ್ರಜವಾರಿಧಿ

ಗಳ್ಕಷಾಯಸಂಹ ಾರಿಗಳಾತ್ಮ ಭಾವಪರರಿದ್ಧಜಿ

ನೇಶ್ವರ ಧರ್ಮರಾಜಿಗಳ್ಪೂರಿಚರಿತ್ರ ಬಾಹುಬಲಿ

ದೇವರಭಿಷ್ಟುತ ಪಾರ್ಶ್ವದೇವರುಂ ಸೂರಿವಿನೂ

ತವದ್ವಿಷದ ಕೀರ್ತಿಯನಾಂತೆಸೆದರ್ನಿರಂತರ

೦॥ ಜೈನಮತಾಂಬುರಾಶಿ ಪರಿವರ್ಧನ ಚಂದ್ರ

ನನ್ಯಸ್ತತಂದನಂ ಮಾನಿತಸಾರ ಸರ್ವಗುಣ

ರುಂದ್ರನನುನ್ನತ ಕೀರ್ತಿ ಸಾಂಧ್ರನಂ / ಪೀನ

ವಿವೊಹ ್ ಮಾರಣ ಮೃಗೇಂದ್ರನನುದ್ಧ, ಕೃಪಾನದೀಂದ್ರನಂ ಭೂನುತ ಮೇಘಚಂದ್ರನ

ನ ಶೇಷಜನಂ ನಲಮಿದೆ ಬಣ್ಣೆ ಕುಂ॥ ಅರಿಯದ ವಿದ್ದೆಯಿಲ್ಲ ಬಿಡದೋದದ ಕೇಳಿದ ಶಾಶ್ತ್ರ ವಿ

ಲ್ಲ ಕೂರ್ತೆರಗದ ಭೂಪರಿಲ್ಲ ಸಾ ಿ ಸೋಲದ ವಾದಿಗಳಿಲ್ಲ ಸಂತತಂ ನೆರೆಯೆ ಸಮಸ್ತರುಂ ಪೊ

ಗಳದಿರ್ದ ಕವಿತ್ವಮುವಿಲ್ಲ ಲ ೋಕದೊಲ್ಲುರೆ ಪಾರ್ಶ್ವದೇವಸುತ ಬಾಹ ುಬಲಿ ಬ್ರತಿಶಕ್ತಿಯದ್ಭು

ತಂ॥ ಸಕವರ್ಷ ೧೨೫೫ನೆಯ ಸಂದ ವಿರೋಧಿಕೃತು ಸಂವತ್ಸರದ ಮಾರ್ಗಸಿರ ಸು

೧೫ ಆ। ವಾರದ ದಿವದಲ್ಲಿ ಮೇಘಚಂದ್ರರು ಮುಕ್ತಿಗೆ ಸಂದರು ಮಂಗಳ ಮಹ ಾಶ್ರೀ

ಯವರಿಗೆ ನಿಶಿಧಿಯ ಮಾಡಿಸಿದವ ಕೋಟಿಯ ॥ ಮೇಘಚಂದ್ರ ದೇವರ

ಶಿಷ್ಯರು ಮಾಣಿಕ್ಯ ದೇವರು ನ

.....ಯ ದೇವರು

ಈ ಶಾಸನವು ಮೂರು ಹ ಂತಗಳನ್ನು ಒಳಗೊಂಡಿದ್ದು ಮೇಲಹ ಂತದಲ್ಲಿ ಸಿಹ ಾಸ ನಾಟ, ಸೂರ್ಯ, ಚಂದ್ರ, ಚಾಮರಗಳ್ ನಡುವೆ ಮುಕ್ಕೊಡೆಯ್ ಕೆಳಗೆ ಪದ್ಮಾಸನಿ ತೀರ್ಥಂಕರನು, ಮಧ್ಯಭಾಗದಲ್ಲಿ ಅಟ್ಟವಣೆಯಲ್ಲಿ ತಾಡಪತ್ರಗಳನ್ನಿಟ್ಟು ಬೋಧನೆಗೈಯ್ಯುತ್ತಿರುವ ಮುನಿಗಣ ಮತ್ತು ಕೈಗಳನ್ನೆತ್ತಿ ವಂದಿಸುತ್ತಿರುವ ಶಿಷುಅನು ಮತ್ತು ಕೆಳಹ ಂತದಲ್ಲಿ ಈರ್ವರು ಮುನಿಗಳು ಮತ್ತು ಕಂತಿಯ ಉಬ್ಬುಶಿಲ್ಪಗಳಿವೆ. ಇದರ ಶಾಸನಪಾಠದಲ್ಲಿ ಬರುವ ಪಾರ್ಶ್ವದೇವರು, ಮೇಘ ಚಂದ್ರ ಮತ್ತು ಬಾಹ ುಬಲಿ ವೃತಿಗಳನ್ನು ಕುರಿತು ಮೂರು

ಪದ್ಯಗಳನ್ನು ಏಚಿಗಿನ ಹಳ್ಳಿ ( ಕಾರುವುರ) ಯವನೇ ಆದ ' ಸಕಳ ವಿದ್ಯಾಚಕ್ರವರ್ತಿ,' ಕೊಂದಕುಂದಾನ್ವಯಿ, ಪುಸ್ತಕಗಚ್ಛ ಪೂರ್ಣತಿಳಕ ನಯಯುಕ್ತ ಮೂಲಸಂಘದ ಒಡೆಯ, ದೇಶೀಗಣ ಗ್ರೇಸರ, ನಯಕೀರ್ತಿ ಶಿಷ್ಯನಾದ ಬಾಹುಬಲಿ ಪಂಡಿತನ ' ಧರ್ಮನಾಥ ಪುರಾಣ' ದಿಂದ ಆಯ್ದುಕೊಳ್ಳಲಾಗಿದೆ.

ಶ್ರೀ ನೇಮಿಶ್ವರ ಬಸದಿಯ ಈಶಾನ್ಯ ಬಯಲಿನಲ್ಲಿ ನೆಟ್ಟಿರುವ ಕಲ್ಲಿನಲ್ಲಿ ಶ್ರೀ ನೇಮಿನಾಥ ಸ್ವಾಮಿಯ ನೈವೇದ್ಯಾರ್ಥವಾಗಿ ಉಂಬಳಿಯನ್ನು ಬಿಟ್ಟುದಾಗಿ ತಿಳಿಸಲಾಗಿದೆ. ಆದರೆ ಈ ಶಾಸನವು ಕಾಲನ ದವಡೆಯಲ್ಲಿ ಸಿಲುಕಿ ಸವೆದು ಹೋಗುತ್ತಿರುವುದರಿಂದ ಪೂರ್ಣ ಮಹಿತಿಯು ಲಭ್ಯವಿಲ್ಲದಾಗಿದೆ. ಬಸದಿಯ ದಕ್ಷಿಣಕ್ಕೆ ಹೊಳೆಯ ಮಧ್ಯದಲ್ಲಿ ಬಂಡೆಯ ಮೆಲೆ ದೇವರ ಮತ್ತು ಅಮ್ಮನವರ ಪಾದಗಳ ಕೆಳಗೆ ೧೯ನೆಯ ಶತಮಾನಕ್ಕೆ ಸೇರಿದ ಶಾಸನದ ಪ್ರಕಾರ ಬೋಳನೆಂಬ ಕಾವಲುಗಾರನ ಮೃತ್ಯು. ಆತನ ತಾಯಿ ಅಕ್ಕಮ್ಮನೆಂಬುವಳು ಮಾಹಿತಿ ಮತ್ತು ಕೆತಪುವೆಂಬುವನ ಮಡದಿ ಚೌದೂದೇಮಿಯ ಹೆಸರುಗಳು ಕಂಡುಬರುತ್ತವೆ. ಮಂದಿರದ ಪ್ರಾಂಗಣದೊಳಗಿನ ಬಲಭಾಗದ ಕಟ್ಟೆಯ ಮೆಲೆ ಭಿನ್ನವಾಗಿರುವ ಯಕ್ಷಿಯ ಮೂರ್ತಿಯೊಂದಿದೆ.

ಇತ್ತೀಚಿನ ವರುಷಗಳನ್ನುಹಲವು ಜಿನಧರ್ಮಾಸಕ್ತರು ಬಸದಿಯನ್ನು ಜೀರ್ಣೋದ್ಧಾರಗೊಳೀಸಿದ್ದಾರೆ.

ಜೈನ ಕೇಂದ್ರ ಚಿಕ್ಕಹನಸೋಗೆ

ಜೈನಧರ್ಮದ ಪ್ರಾಚೀನ ನೆಲೆಯಲ್ಲೊಂದಾದ ಚಿಕ್ಕಹನಸೋಗೆ ಗ್ರಾಮವು ಚುಂಚನಕಟ್ಟೆ ಹೋಬಳಿ ಕೃಷ್ಣರಾಜನಗರ ತಾಲ್ಲೂಕು ಮೈಸೂರು ಜಿಲ್ಲೆಗೆ ಸೇರಿದುದಾಗಿದೆ. ಭವ್ಯ ಧಾರ್ಮಿಕ ಪರಂಪರೆಯನ್ನುಹೊಂದಿ ಪೌರಾಣಿಕವಾಗಿಯೂ ತನ್ನ ಪ್ರಾಡುರ್ಭಾವವನ್ನು ಬೀರುತ್ತಲಿದೆ. ಸಾತ್ವಿಕಪ್ರಭು ಶ್ರೀರಾಮಚಂದ್ರನು ತನ್ನ ಪಾದಸ್ಪರ್ಶದಿಂದ ಈ ಕ್ಷೇತ್ರವನ್ನು ಪುನೀತಗೊಳಿಸಿ ನಂಬುಗೆಯ ಮಹತ್ವದ ಸಂಗತಿಯಾಗಿದೆ.

ಆಳಿದ ರಾಜಮನೆತನಗಳಲ್ಲಿ ಗಂಗರು, ಚೋಳರು. ಚೆಂಗಾಳ್ವರು ( ಚಂಗಾಳ್ಯಾರು) ಕೊಂಗಾಳ್ವರು ಮತ್ತು ಹೊಯ್ಸಳರು ವಿವಿಧ ಕಾಲಘಟ್ಟಗಳಲ್ಲಿ ಇದರ ಮೇಲೆ ತಮ್ಮ ಆಧಿಪತ್ಯವನ್ನು ಹೊಂದಿ ಧಾರ್ಮಿಕ ಉತ್ಕ್ರಾಂತಿಗೆ ಕಾರಣಪುರುಷರಾದರು. ಸಾಮ್ರಾಜ್ಯಗಳ್ ಘಟಿಸಿಹೋಗಿರುವ ನಾನಾ ಹೋರಾಟ ಕಾದಾಟಗಳ ರಣರಂಗತಾಣವಾಗಿದ್ದು ' ಹಣಸೋಗೆ ಯುದ್ಧ' ವೆಂದೇ ಖ್ಯಾತ ಗೊಂಡ ಕನ್ನಡ ನಾಡಿನ ಗಂಡುಮೆಟ್ಟಿನ ಸ್ಥಳವಿದಾಗಿದೆ. ಶಾಸನವೊಂದುರಲ್ಲಿ,'.......... ಪಂಚಮರಾಯ ಎಂಬಾತನು ಹನಸೋಗೆಯ ಯುದ್ಧದಲ್ಲಿ ಅನೇಕರನ್ನು ಕೊಂದಹಾಕಿದ್ದಕ್ಕೆ ಚೋಳ ರಾಜನು ಬಹುವಾಗಿ ಮೆಚ್ಚಿ ಅವನಿಗೆ ' ಕ್ಷತ್ರಿಯ ಶಿಖಾಮಣಿ ಕೊಂಗಾಳ್ವ' ಎಂಬ ಪಟ್ಟವನ್ನು ಕಟ್ಟಿ ಮಾಲಾಂಬಿ ಎಂಬ ಊರನ್ನು ದತ್ತಿಯಾಗಿ ಬಿಟ್ಟುಕೊಟ್ಟನು" ಎಂದು ಹೇಳಲಾಗಿದೆ.* ಪ್ರಾರಂಭದಲ್ಲಿ ಚೋಳರು ಗಂಗರಾಜರನ್ನು ಸೋಲಿಸಿದರೆ ೧೨ನೆಯ ಶತಮಾನದ ಆದಿಯಲ್ಲಿ

ಹೊಯ್ಸಳ ರಾಜರು ಚೋಳರನ್ನು ಮಣಿಸಿ ವಿಜಯ ಪಾತಕೆಯನ್ನು ಹಾರಿಸಿದ್ದರು. ಚೆಂಗಾಳ್ವರು ಸಾಮಂತರಾಗಿದ್ದುಕೊಂಡು ೧೧ರಿಂದ ೧೬ನೆಯ ಶತಮಾನದವರೆಗೆ ಇದರ ಆಳ್ವಿಕೆಯನ್ನು ನಡೆಸಿದರು. ಇವರು ರಾಜಧಾನಿಯಾಗಿದ್ದಹನಸೋಗೆಯು

* ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ : ಡಾ.ಎಂ.ಚಿದಾನಂದಮೂರ್ತಿ

' ಪನಸೋಗೆ' ಎಂಬುದಾಗಿಯೂ ಕರೆಯುಲ್ಪಟ್ಟಿದ್ದು ಇಲ್ಲೊಂದು ಚಂಗಳ ತೀರ್ಥವೆಂಬುದು ಇದ್ದದಾಗಿಯೂ ತಿಳಿದುಬರುತ್ತದೆ. ಚಿಕ್ಕಹನಸೋಗೆಯ ಸಮೀಪದಲ್ಲಿಯೇ ಕಾವೇರಿ ನದಿ ದಂಡೆಯ ಮೇಲೆ ದೊಡ್ಡ ಹನಸೋಗೆಯೆಂಬ ಸ್ಥಳವಿರುವುದು.

ಶ್ರೀ ಆದಿಜಿನೇಶ್ವರ ಬಸದಿ

ಚಿಕ್ಕಹನಸೋಗೆಯು ಮಠ, ಬಸದಿ ಮತ್ತು ಜೈನಮುನಿಗಳ ಪ್ರಮುಖ ತಾಣವಾಗಿ ಬಾಳಿಬೆಳಗಿದ್ದಿತು. ಇಲ್ಲಿನ ಜೈನ ಗುರುಮಠವೊಂದು ನಿರಂತರ ಕ್ರಿಯಾಶೀಲತೆಯ ಅಸ್ತಿತ್ವವನ್ನು ಹೊಂದಿದ್ದುದಲ್ಲದೆ ಅನೇಕ ಉಪಶಾಖೆಗಳು ಕಾರ್ಯನಿರ್ವಹಿಸುತ್ತಿದ್ದವು. ಮಠದ ಪೀಠಾಧಿಪತಿಗಳು ಚಾರುಕೀರ್ತಿ ಪಂಡಿತ ದೇವರೆಂಬ ಅಭಿಧಾನದಿಂದ ಕರೆಯಲ್ಪಡುತ್ತಿದ್ದುದಾಗಿ ೧೬ನೆಯ ಶತಮಾನದ ಶಾಸನವೊಂದು ತಿಳಿಸುತ್ತದೆ. ದೂರದ ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳದ ದಾನಸಾಲೆಮಠವು ಇದರ ಶಾಖಮಠವಾಗಿದ್ದುದಾಗಿ ಅಲ್ಲಿನ ಚತುರ್ಮುಖ ಬಸದಿಯ ಸಮೀಪದಲ್ಲಿ ದೊರೆತ ಶಿಲಾಲೇಖವೊಂದು ಅರುಹುತ್ತದೆ. ಶ್ರೀಮಠದ ಪೀಠಸ್ಥ ಗುರುಗಳಾದ ಸ್ವಸ್ತಿಶ್ರೀ ಲಲಿತಕೀರ್ತಿ ಭಟ್ಟಾರಕ ಪಟ್ಟಾರಕ ಪಟ್ಟಾಚಾರ್ಯ ಮಹಾಸ್ವಾಮಿಗಳು ಪನಸೋಗೆಯ ದೇಶೀಯ ಗಣಕ್ಕೆ ಸೇರಿದವರೆಂದು ಉಲ್ಲೇಖಿಸಲಾಗಿದೆ.

ಪನಸೋಗೆಯ ಶ್ರೀ ಪ್ರಭಾಚಂದ್ರ ಸಿದ್ಧಾಂತದೇವರಿಂದ ದೀಕ್ಷಿತರಾದ ೬೮ ಶಿಕ್ಷಕರು ೬೮ ಶಾಖಾಮಠಗಳಿಗೆ ನೇಮಕವಾಗಿದ್ದರೆಂದು ಹೇಳಲಾಗಿದೆ. ಯಕ್ಷರ ಪಕ್ಕದಲ್ಲಿರುವ ೧೨ನೆಯ ಶತಮಾನದ ಕಂಬಶಾಸನವು ದೇಶಿಗಣ ಪುಸ್ತಕಗಚ್ಛಕ್ಕೆ ಸೇರಿದ ಚಿಕ್ಕಹನಸೋಗೆಯಲ್ಲಿ ೬೪ ಬಸದಿಗಳಿದ್ದುದಾಗಿ ತಿಳಿದುಬರುತ್ತದೆ. ಗ್ರಾಮದ ಪ್ರಮುಖ ಆಕರ್ಷಣೆಯಾದ ಶ್ರೀ ವೃಷಭ ಸೇರಿದು ದಾಗಿದೆ, ಈ ಚೈತ್ಯಾಲಯದ ಉಗಮ, ನಿರ್ಮಾಣ, ಜೀರ್ಣೋದ್ಧಾರ ಮತ್ತು ಧರ್ಮಪ್ರಭಾವನೆ ಕುರುತಂತೆ ಶಾಸನಾಧಾರಗಳನ್ನೊಳಗೊಂಡಂತೆ ಇತರ ಅನೇಕ ಮಾಹಿತಿಗಳು ಲಭ್ಯವಿರುವುದು ಸಂತಸದ ಸಂಗತಿಯಾಗಿದೆ. ಇದೊಂದು ತ್ರಿಕೂಟ ಚೈತ್ಯಾಲಯ. ಪಶ್ಚಿಮದ ಮೂಲ ಗರ್ಭಗುಡಿಯಲ್ಲಿ ಶ್ರೀ ಆದಿನಥ ದಕ್ಷಿಣದಲ್ಲಿ ಶ್ರೀ ಶಾಂತಿನಾಥ ಮತ್ತು ಉತ್ತರದಲ್ಲಿ ಶ್ರೀ ನೇಮಿನಾಥ ಮೂರ್ತಿಗಳು ಪ್ರತಿಷ್ಠಾಪಿಸಲ್ಪಟ್ಟಿವೆ.

ಹೊಯ್ಸಳ ನರೇಶ ವಿನಯಾದಿತ್ಯನ ಕಾಲದಲ್ಲಿ ಇಲ್ಲಿನ ಬಸದಿಯು ನಿರ್ಮಿತವಾಯಿತೆಂಬ ಉಲ್ಲೇಖವಿರುವುದಾದರೂ ಬಸದಿಯು ನಿರ್ಮಿತವಾಯಿತೆಂಬ ಉಲ್ಲೇಖವಿರುದಾದರೂ ಬಸದಿಯ ಬಗಿಲಿನ ಮಂಟಪದ ಮೇಲ್ಭಾಗದ ೧೧ನೆಯ ಶತಮಾನದ ರೀತ್ಯ ಇದನ್ನು ಚೆಂಗಳ್ವ ದಂಡನಾಯಕ ರಾಜೇಂದ್ರ ಚೋಳನು ನಿರ್ಮಿಸಿರಬಹುದೆನಿಸುತ್ತದೆ. ಇದು ವೀರರಾಜೇಂದ್ರನ ಕೈಂಕರ್ಯದಿಂದ ನಿರ್ಮಾಣಗೊಂಡುದರಿಂದ ರಾಜೇಂದ್ರಚೋಳ ಜಿನಾಲಯವೆಂದೂ ಕರೆಯಲ್ಪಟ್ಟಿದೆ. ೧೭-೧೨-೧೧೧೦ ರ ನಿಷಿಧಿಯ ಕಲ್ಲೊಂದು ನಾಕಿಮಯ್ಯ ದಂಡನಾಯಕನೆಂಬುವನನ್ನು ಉಲ್ಲೇಖಿಸುತ್ತಾ ದಿವಾಕರನಂದಿ ಸಿದ್ಧಾಂತದೇವನ ಶಿಷ್ಯ ಬಸವಾವೆ ಘಂಟಿಯಿಂದ ಸಂದ ಆರ್ಥಿಕ ಕಾಣಿಕೆಯನ್ನು ತಿಳಿಸುತ್ತದೆ. ತೊಲೆಗಳ ಮೇಗಣ ಶಾಸನವೊಂದು ದೇಗುಲವು ಜೀರ್ಣೋದ್ಧಾರಗೊಂಡುದನ್ನು ತಿಳಿಸಿ ನೀರಿನ ವ್ಯವಸ್ಥೆ ಹಾಗೂ ದಾನದತ್ತಿಗಳ ಮುಂದುವರಿಕೆಯನ್ನು ತಿಳಿಸುವುದು. ಶ್ರೀ ಶಾಂತೀಶ್ವರ ಗುಡಿ ಬಾಗಿಲಿನ ತೊಲೆಯ ಮೇಲಿನ ೧೧-೧೨ ನೆಯ ಶತಮಾನದ ಶಾಸನವು ಹನಸೋಗೆಯ ೬೪ ಬಸದಿಗಳು ಮತ್ತು ತಲಕಾವೇರಿಯ ಸಮಸ್ತ ಜಿನಾಲಯಗಳಲ್ಲಿನ ಮುನಿಗಳ ಸಮುದಾಯದ ಮುಖಂಡ ( ಧರ್ಮಾಧಿಕಾರಿ) ಜಯಕೀರ್ತಿ ಮುನಿಯನ್ನು ಹೆಸರಿಸುತ್ತದೆ. ಶ್ರೀ ಆದೀಶ್ವರಸ್ವಾಮಿ ಗುಡಿ ಮುಖ ಮಂಟಪದ ಬಲಭಾಗದ ತೊಲೆಯ ಮೇಲಿನ ಶಿಲಾಲೇಖದ ತುಣುಕೊಂದು ೧೨ನೆಯ ಶತಮಾನಕ್ಕೆ ಸೇರಿದುದಾಗಿದ್ದು ಜಮೀನು ದಾನವನ್ನು ಅರುಹುತ್ತದೆ. ಇದರ ನವರಂಗದ ಪೂರ್ವಮುಖದ ತೊಲೆಯ ಮೇಲಿನ ಶಾಸನವು ಬೊಮ್ಮ ಸೆಟ್ಟಿಯೆಂಬುವನು ನವರಂಗವನ್ನು ಜೀರ್ಣೋದ್ಧಾರ ಗೊಳಿಸಲೋಸುಗ ತೊಲೆಯೊಂದನ್ನು ಅಳವಡಿಸಿದುದನ್ನು ಹೇಳಲಾಗಿದೆ. ೧೨ನೆಯ ಶತಮಾನದ ಶ್ರೀ ಆದೀಶ್ವರಸ್ವಾಮಿಯ ಪೀಠದ ಮೇಲಿನ ಶಿಲಾಲೇಖವು ಮೂಲಸಂಘ ದೇಶಿಗಣ ಪುಸ್ತಕಗಚ್ಛದ ಜಯಕೀರ್ತಿ ಭಟ್ಟಾರಕರ ಶಿಷ್ಯನಾದ ಬಾಹುಬಲಿ ದೇವನು; ಅಂತೆಯೇ ಶ್ರೀ ಬಲಾತ್ಕಾರ ಗಣದ ನಾಗಚಂದ್ರ ದೇವರ ಶಿಷ್ಯರು ಸಮಯಾಭರಣ ಭಾನುಕೀರ್ತಿ ದೇವರು ಪುನರ್ ಜೀರ್ಣೋದ್ಧಾರ ಮಾಡಿದದನ್ನು ತಿಳಿಸುತ್ತದೆ. ಗರ್ಭಗೃಹದ ಗೋಮುಖದ ಮೇಲಿನ ೧೬ನೆಯ ಶತಮಾನದ ಶಾಸನವು ಸ್ವಸ್ತಿಶ್ರೀ ಶ್ರೀ ಚಾರುಕೀರ್ತಿ ಪಂಡಿತದೇವರ ಶಿಷ್ಯನು ಮತ್ತು ಚಿಕ್ಕಣ್ಣಯ್ಯನ ಮಗನಾದ ಪಂಡಿತಯ್ಯನೆಂಬುವನಿಂದ ವಿಶ್ವಾವ ಸೂಸಂದ ಜ್ಯೇಷ್ಠ ಶುಕ್ರವಾರ ೫ ರಂದುಆದೀಶ್ವರ, ಚಂದ್ರನಾಥ ಮತ್ತು ಶಾಂತಿನಾಥ ತೀರ್ಥಂಕರರ ವಿಗ್ರಹಗಳ ಪ್ರತಿಷ್ಠಾಪನೆಯನ್ನು ತಿಳಿಸುವುದು.

ದೇಗುಲದ ರಚನಾ ವಿನ್ಯಾಸವು ಅನುಪಮವಾದ ಚಾಲುಕ್ಯ ಮತ್ತು ಹೊಯ್ಸಳ ಶೈಲಿಗಳ ಸಂಗಮವಾಗಿರುವುದು. ಇದರ ಭಿತ್ತಿಗಳು, ಸ್ತಂಭಗಳು ಮತ್ತು ಮೇಲ್ಛಾವಣಿಗಳು ಕಣಶಿಲೆಯಲ್ಲಿದ್ದರೂ

ವಿಗ್ರಹಗಳು ಮತ್ತು ದ್ವಾರಗಳು ಬಳಪದ ಕಲ್ಲಿನಿಂದ ನಿರ್ಮಾಣಗೊಂಡಿವೆ. ಶ್ರೀ ನೇಮಿನಾಥ ವಿಗ್ರಹದ ಮುಕ್ಕೊಡೆಯು ಮುರುಟಿಹೋಗಿದೆ. ಶಾಂತಿನಾಥ ಮತ್ತು ಆದಿನಾಥ ಮೂರ್ತಿಗಳು ಅಲಂಕೃತ ತೋರಣಗಳು ಹಾಗೂ ಸಿಂಹಪೀಠಗಳನ್ನೊಂದಿವೆ. ಸುಖನಾಸಿನವರಂಗದ ನಡುವಿನ ದ್ವಾರಗಳು ಬಹುಕಲಾತ್ಮಕ ಪಟ್ಟಿಕೆಗಳಿಂದ ಕೂಡಿವೆ. ಅರಳಿದ ಪುಷ್ಪಗಳು, ಯಕ್ಷರು ಮತ್ತು ಸಿಂಹದ ಕೆತ್ತನೆಗಳೂ ಆಕರ್ಷಣೀಯವಾಗಿವೆ.

ಹಣೆಪಟ್ಟಿಯಲ್ಲಿ ಗಜಲಕ್ಷ್ಮಿ, ಹಂಸಗಳು, ಕೀರ್ತಿಮುಖ ಮತ್ತು ಕನ್ನಡ ಶಾಸನಗಳಿವೆ. ನವರಂಗವು ಸಾಕಷ್ಟು ವಿಶಾಲವಾಗಿದ್ದು ಕಂಬಗಳು ವೃತ್ತಾಕಾರದಲ್ಲಿನ ವಿನ್ಯಾಸದಿಂದಾಗಿ ಹೊಯ್ಸಳ ವಾಸ್ತುಶೈಲಿಯ ಪ್ರಾತಿನಿಧಿಕಗಳಾಗಿವೆ. ಗದ್ದೆ ಬಸವನಗುಡಿಯಲ್ಲಿರುವ ೧೦ ನೆಯ ಶತಮಾನಕ್ಕೆ ಸೇರಿದ ತೊಲೆಯ ಶಾಸನವು ಷುಣಾಚಾರ್ಯ ಮುನಿಗಳ ಸಮಾಧಿ ಮರಣವನ್ನು ತಿಳಿಸುತ್ತದೆ. ಇದನ್ನು ಜಂಗಮತೀರ್ಥರೆಂದು ಖ್ಯಾತರಾಗಿದ್ದ ಕುನ್ನಿಳೆ ದೇವರು ಬರೆಸಿದುದಾಗಿಯೂ ಕಂಡುಬರುತ್ತದೆ.

## ಸಂರಕ್ಷಣೆ

ಧಾರ್ಮಿಕ ಉತ್ಥಾನದ ಪ್ರೇರಕ ಶಕ್ತಿಯಾದ ಜಿನಾಲಯಗಳ ಪುನರುಜ್ಜೀವನ ಕಾಯಕವು ಬಹು ಅತ್ಯಗತ್ಯವಾದುದು. ಅಂತೆಯೇ ಚಿಕ್ಕಹನಸೋಗೆಯ ಧಾರ್ಮಿಕ ಪ್ರತೀಕವಾದ ಆದೀಶ್ವರ ದೇಗುಲವು ಇತ್ತೀಚಿನ ದಶಕಗಳಲ್ಲಿ ಕಾಲಕ್ಕನುಗುಣವಾಗಿ ಜೀರ್ಣೋದ್ಧಾರಕ್ಕೊಳಪಟ್ಟಿದೆ. ಶಿಥಿಲವಾಗಿದ್ದ ಈ ಬಸದಿಗೆ ಕಾಯಾಕಲ್ಪ ನೀಡಲೋಸುಗ ೧೮–೨–೧೯೭೪ರಲ್ಲಿ ಶ್ರವಣಬೆಳಗೊಳದ ಸ್ವಸ್ತಿಶ್ರೀ ಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮಿಗಳು ಸ್ಥಳಕ್ಕೆ ನೀಡಿದ ಭೇಟಿಯ ತತ್ಫಲವಾಗಿ ೨೦–೨–೧೯೭೪ರಂದು ಸಂಘದ ಜೈನ ಕೇಂದ್ರ ಸಾಲಿಗ್ರಾಮದಲ್ಲಿ ಜೀರ್ಣೋದ್ಧಾರ ಸಮಿತಿಯೊಂದು ರೂಪು ಗೊಂಡಿದ್ದಿತು. ಮಾಜಿ ಮುಖ್ಯಮಂತ್ರಿ ದಿ||ಡಿ. ದೇವರಾಜ ಅರಸ್ ರವರ ಘನಸರ್ಕಾರ ಮತ್ತು ದಿ|| ಸಾಹು ಶ್ರೀ ಶಾಂತಿಪ್ರಸಾದ ಜೈನ ಅವರ ಸಹಯೋಗದೊಂದಿಗೆ ಮತ್ತೊಮ್ಮೆ ಇದರ ಜೀರ್ಣೋದ್ಧಾರವನ್ನು ಕೈಗೊಳ್ಳಲಾಗಿದ್ದಿತ್ತು. ಪ್ರಸ್ತುತ ಸಾಲಿಗ್ರಾಮದ ಜೈನ ಸಮಾಜ, ಮೈಸೂರಿನ ಧವಳಶ್ರೀ ಜಿನಪೂಜಾ ಮಹಿಳಾಸಮಿತಿ ಮತ್ತು ಹನಸೋಗೆ ಗ್ರಾಮಸ್ಥರ ಆಶ್ರಯದಲ್ಲಿ ಪೂಜಾ ಕೈಂಕರ್ಯವ್ಯವಸ್ಥೆಯು ನೆರವೇರುತ್ತಿರುವುದು ಬಹು ಅಭಿನಂದನಾರ್ಹವಾದು ದಾಗಿದೆ. 'ಅಭಯ ಜಿನಾಲಯ'ದ ಧಾರ್ಮಿಕ ಪ್ರಭಾವನೆಯು ನಿತ್ಯ ನಿರಂತರವಾಗಿ ಸಾಗಬೇಕಾದುದು ಅಂದು ಇಂದು ಎಂದಿನ ಮಹತ್ವದ ಕರ್ತವ್ಯವಾಗಿದೆ.

## ಬಸ್ತಿಹಳ್ಳಿಯ ಶ್ರೀ ಗೊಮ್ಮಟ

ಆಧುನಿಕ ನಾಗರಿಕತೆ–ಸಸ್ಕೃತಿಯ ತೆಕ್ಕೆಯಲ್ಲಿ ಸಿಕ್ಕಿ ನಲುಗುತ್ತಿರುವ ಪ್ರಾಚೀನ ವಾಸ್ತುಶಿಲ್ಪ ನೆಲೆಯೊಂದು ನಮ್ಮೆಲ್ಲರ ಕಣ್ಣೆದುರೇ ನಾಶವಾಗಿ ಹೋಗುತ್ತಿರುವುದನ್ನು ಜಗದ್ವಿಖ್ಯಾತ್ಹ ಕನ್ನಂಬಾಡಿ ಕಟ್ಟೆಯ ( ಕೃಷ್ಣರಾಜಸಾಗರ ಜಲಾಶಯ ) ಉತ್ತರ ದಿಕ್ಕಿನೆಡೆಯಲ್ಲಿ ಕಾಣಬಹುದು. ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ( ಅತ್ತಿಗುಪ್ಪೆ ) ತಾಲ್ಲೂಕು ಮಾವಿಕೆರೆ ಬಳಿಯ ಬೂಕನಕೆರೆ ಹೋಬಳಿಗೆ ಸೇರಿದ ಈ ತಾಣವು ಸಮೀಪದ ಯರಗನಹಳ್ಳಿ–ಎ.ಕೆಹಳ್ಳಿಗಳಿಂದ ಸುತ್ತುವರಿಯಲ್ಪಟ್ಟು ಬಸದಿ ಹೊಸಕೋಟೆ–ಕೆ.ಬಸ್ತಿ–ಬಸ್ತಿಹಳ್ಳಿ ಎಂಬದಾಗಿ ಕರೆಸಿಕೊಳ್ಳುತ್ತಿದ್ದು ಕೃಷ್ಣರಾಜಪೇಟೆಯಿಂದ ಸುಮಾರು ೧೨ ಕಿ.ಮೀ. ದೂರದಲ್ಲಿದೆ.

ಹೊಯ್ಸಳದೊರೆ ವಿಷ್ಣುವರ್ಧನ ( ಬಿಟ್ಟಿದೇವ)ನ ಆಪ್ತ ಮಹಾಪ್ರಧಾನ ದಂಡನಾಯಕನು ಮತ್ತು ಸ್ವಯಂ ಜೈನಧರ್ಮೀಯನೂ ಆಗಿದ್ದ ಪುಣಿಸಿಮಯ್ಯ (ಹುಣಿಸೆ ಪುಣಿಸೆಯ್ಯ) ನೆಂಬುವನಿಂದ ಪ್ರತಿಷ್ಠಾಪಿಸಲ್ಪಟ್ಟ ಸುಮಾರುಅ ೧೪ ಅಡಿಗಳೆತ್ತರದ ಪೂರ್ವಾಭಿಮುಖವಾಗಿರುವ ಭಗವಾನ ಶ್ರೀ ಬಾಹುಬಲಿ ಮೂರ್ತಿಯು ಕರ್ನಾಟಕದ ಹತ್ತಾರು ಚಾರಿತ್ರಿಕ ಗೊಮ್ಮಟ ಶಿಲ್ಪಗಳ ಸಾಲಿನಲ್ಲಿ ನಿಲ್ಲುವಂತಹುದು. ಕ್ರಿ.ಶ.೧೧೪೭ರ ಹೊಯ್ಸಳರ ಕಾಲದ ಶಿಲಾಶಾಸನಗಳು ಇದರ ಮಾಹಿತಿಯನ್ನು ನೀಡುತ್ತವೆ. ಬಳಪದ ಕಲ್ಲಿನ ಕಾಯೋತ್ಸರ್ಗದ ಪ್ರತಿಮೆಯು ತನ್ನ ಬಲಪಾರ್ಶ್ವಕ್ಕೆ ಟುಸುವಾಲಿದ್ದು ಕಳೆದ ಶತಮಾನದ ಅಂಚಿನಲ್ಲಿ ಹರಿಜನ ಜಿನಭಕ್ತರಿಂದ ಕಟ್ಟಿದ್ದೆನ್ನಲಾದ ಸುತ್ತಲಿನ ಗಾರೆ ಕಲ್ಲುಗಳ ಸರಳ ಸಾಧಾರಣ ರಕ್ಷಣೆಯ ಗುಡಿಯಿಂದ ಆವರಿಸಲ್ಪಟ್ಟಿದೆ. ಮೂರ್ತಿಯ ಪಾದಗಳು ಮತ್ತು ಕಾಲುಗಳ ಇಕ್ಕೆಲಗಳಲ್ಲಿ ಬಳ್ಳಿಗಳು ಹಬ್ಬಿವೆ. ಸೆುರಿಯ ಪ್ರದೇಶವು ವಿಶಾಲವಾಗಿದ್ದು ಟುಸು ದಿಣ್ಣೆಯ ಮೇಲೆ ವಿಸ್ತಾರವಾದ ಪಂಚಜಿನ ಚೈತ್ಯಾಲಯಗಳ ಅಂಗಾಂಗಳ ಭಗ್ನಾವಶೇಷಗಳು ಚೆಲ್ಲಾಪಿಲ್ಲಿಯಾಗಿ ಹರಡಿವೆ. ಅಲ್ಲಲ್ಲಿ ಕಲಾತ್ಮಕ ಪೀಠದ ಮೇಲೆ ಮಂಡಿಸಿ ಮುರುಟಿಹೋಗಿರುವ ಶ್ರೀ ಪಾರೀಶ್ವನಾಥ ಮತ್ತಿತರ ತೀರ್ಥಂಕರರ ನಾಲ್ಕಕ್ಕೂ ಮಿಕ್ಕ ಪದ್ಮಾಸನ ಪ್ರತಿಮೆಗಳನ್ನು ಕಾಣಬಹುದು. ಅಂಗಹೀನವಾಗಿರುವ ತೀರ್ಥಂಕರರ ಶಿಲ್ಪಗಳೊಂದಿಗೆ ಅಂದ ಚೆಂದವನ್ನು ನೀಗಿಕೊಂಡ ರಕ್ಷಕ ದ್ವಾರಪಾಲಕರು, ಅರೆಬರೆ ಕಿರುಮಂಟಪಗಳು, ಚೂರುಚೂರಾದ ಮತ್ತು ಬಿರುಕು ಬಿಟ್ಟಿರುವ ಅಲಂಕೃತ ಮೇಲ್ಛಾವಣಿಯ ಭಾಗಗಳು ಎಲ್ಲೆಡೆ ಅನಾಥವಾಗಿ ಬಿದ್ದಿವೆ. ಚರಕಿ ಯಂತ್ರದಿಂದ ಕಡೆಯಲ್ಪಟ್ಟ ನಯವಾದ ದುಂಡುಕಂಬಗಳು, ಸ್ತಂಭಪೀಠಗಳು, ಬೋದಿಗೆಗಳು, ಕಲ್ಲು ಚಪ್ಪಡಿಗಳು ಮತ್ತು ಹೊಸೆಪಟ್ಟಿಗಳು ಗತಕಾಲದ ತಮ್ಮ ವೈವಿಧ್ಯಮಯ ಕಲಾಸೊಬಗನ್ನು ಸೂಸುತ್ತಿವೆ. ಒಟ್ಟಿನಲ್ಲಿ ನಶಿಸಿ ಹೋಗಿರುವ ಪಂಚಜಿನ ಚೈತ್ಯಾಲಯಗಳ್ ಇದ್ದಿರುವಿಕೆಯನ್ನು ಸ್ಥಾಪಿಸಲು ಈ ಪಳೆಯುಳಿಕೆಗಳು ನೆರವಾಗಿವೆ. ಇಲ್ಲಿನ ಪಾಳುಮಂಟಪದ ಪೂರ್ವಬಾಗಿಲ ತೊಲೆಕಟ್ಟಿನಲ್ಲಿ ಪುಣಿಸಮಯ್ಯನ ಶಾಸನವಿದೆ. ಈತನು ಪರಾಕ್ರಮಿಯೂ, ಕೊಡುಗೈನಿಯೂ

ಮತ್ತು ಸ್ವಾಮಿನಿಷ್ಠನಾಗಿದ್ದ ಚಾರಿತ್ರಿಕ ವ್ಯಕ್ತಿ. ಹೊಯ್ಸಳರ ಆಸ್ಥಾನದಲ್ಲಿ ಗಣ್ಯ ಮನೆಯವರಾಗಿದ್ದ ವಂಶಜರಲ್ಲಿ ಪ್ರಮುಖನು. ಈತ ಮುತ್ತಜ್ಜ ಚಾಮ ಚಮೂಪ, ಅಜ್ಜ ಪುಣಿಸಮ್ಮ ಚಮೂಅಪ ಮತ್ತು ತಂದೆ ಚಾಮರಾಜ. ಈತನನ್ನು ಚಾಮರಾಜನಗರದ ಶ್ರೀ ವಿಜಯಪಾರ್ಶ್ವನಾಥ ಬಸದಿಯಲ್ಲಿರುವ ಕ್ರಿ.ಶ.೧೧೧೬ರ ಶಿಲಾಶಾಸನವು, ' ತೊದವರನಡಪ್ಪಿ ಕೊಂಗರನಡಂಗಿಸಿ ಪೊಲುವರಂ ಪೊರಳ್ಚಿ ಮಾಣದ ಮಲೆಯಾಳಿಗಳ್ ವಿಡಿಸಿ ಕಾನ್ರಿಪಾಳನ ತೋಳಬಿಂಕಮಂ ಬೆದರಿಸಿದ'ನೆಂದು ತಿಳಿಸುತ್ತದೆ. ಅಲ್ಲದೆ ಕೇರಳದೆಡೆಗೂ ಟೆರೆಳೀ ವಿಜಯ ಪತಾಕೆಯನ್ನು ಹಾರಿಸಿದ ಹೆಗ್ಗಳಿಕೆ ಇವನದು. ಇದೇ ಶಾಸನವು ಪುಣಿಸೆಮಯ್ಯನ ಜಿನಭಕ್ತಿಧಾರೆಯನ್ನು, ' ಗಂಗವಾಡಿ ತೊಂಭತ್ತಾರು ಸಾಸಿರದ ಬಸದಿಗಳನಳಂಕರಿಸಿ ದಪಂ ದಂಡಾಧಿಪಂ ಎಂದು ಶ್ಲಾಘಿಸಿದೆ. ವಿಷ್ಣುವರ್ಧಅನನ ಸಂಧಿವಿಗ್ರಹಿ ರಂಗಂಗದಲ್ಲಿ ಶತ್ರುಗಳೊಡನೆ ಕಾದಾಡಿದ ಕಲಿ, ಕೊಂಗರಿಗೆ ಸಿಂಹಸ್ವಪ್ನ ವಾಗಿದ್ದನು. ನಿಲಾದ್ರಿ– ನೀಲಗಿರಿ ( ಉದಕಮಂಡಲ)ಯ ಕಾಲರಾಜನೆಂಬುವನನ್ನು ಪರಾಜಿತಗೊಳಿಸಿದನು ಮತ್ತು ಅಲ್ಲಿನ ತೋಡರನ್ನು ಮಣಿಸಿದನು, ಇಲ್ಲಿನ ಬಸದಿಗಾಗಿ' ಮಾಣಿಕ್ಯ ದೊಡಲೂರು' ( ಮಾಣಿಕ್ಯ ದೊಡಲು ) ಮತ್ತು ಮಾವಿನಕರೆ ಗ್ರಾಮಗಳನ್ನು ದತ್ತಿ ಬಿಟ್ಟಿದ್ದನು. ಹೀಗೆ ತನ್ನ ಮೇರುವ್ಯಕ್ತಿತ್ವದಿಂದ ಕಲಿ ಚಾವುಂಡರಾಯನನ್ನು ಹೋಲುವನು. ಅಲ್ಲದೆ ವಿಷ್ಣುವರ್ಧನನ ಇನ್ನೊಬ್ಬ ಅಧಿಕಾರಿ ಸೋಮಯ್ಯನೆಂಬುವನು ಇಲ್ಲಿನ ಹೊಯ್ಸಳ್ ಜಿನಾಲಯಕ್ಕೆ ಮತ್ತು ಮುನಿಸ್ತಂಭ ಶಾಸನವು ತಿಳಿಸುತ್ತದೆ. ನೆರೆಯ ಕಾವೇರಿ ನದಿಯ ಪ್ರಕೃತಿಯ ಐಸಿರಿಯನ್ನು ನೀಡಿದೆ.

ಇದರ ಪ್ರಸ್ತುತ ದುಸ್ಥಿತಿಗೆ ಯಾರನ್ನು ಅಳಿಯುವುದು ? ಜನರ ಅಸ್ಡೆ ಮತ್ತು ಅನಾವಸ್ಥೆಯನ್ನೇ ? ಕನ್ನಡ ಒಡಲ ಬಸಿರ ಸಿರಿ ಬರಿದಾಗುತ್ತಿದೆಯೇ.? ಬಹುಶಃ ಮುಂದಿನ ಕಾಲಘಟ್ಟಗಳಲ್ಲಿ ಮತ್ತೆಂದೂ ನಿರ್ಮಾಣಗೊಳ್ಳಲಾಗದಂತಹ ವಾಸ್ತುಶಿಲ್ಪ ವೈಭವವನ್ನು ಇಂದಿನ ಧರ್ಮಾಭಿಮಾನಿಗಳು ಮತ್ತು ಕಲಾಭಿಜ್ಞರು ಕಣ್ತೆರೆದು ಉಳಿಐಕೊಳ್ಳದಿದ್ದರೆ ಮುಂಬರುವ ಪೀಳಿಗೆಯವರ ಅಪಾರ ಶಾಪಕ್ಕೆ ಪಕ್ಕಾಗುವುದರಲ್ಲಿ ಕಿಂಚಿತ್ತೂ ಸಂಶಯವಿಲ್ಲ. ಮರೆತಹೋದ ಇತಿಹಾಸದ ಪುಟಗಳಲ್ಲಿ ಸಂಪೂರ್ಣವಾಗಿ ಲೀನವಾಗುವ ಮುನ್ನ ಸೊರಗಿ ಕಚ್ಚುತ್ತಿರುವ ಪ್ರಮುಖ ಜೈನಸೊಬಗಿಯನ್ನು ಹೇಗಾದರೂ ಪ್ರಯತ್ನಿಸಿ ಕಾಪಾಡಿ ಕೊಂಡು ಬರುವುದು ನಮ್ಮೆಲ್ಲರ ಗುರುತರ ಹೊಣೆಯಾಗಿದೆ. ಇತಹ ವಾಸ್ತು ಶಿಲ್ಪ ಪರಿಷ್ಕಾರ– ಆವಿಷ್ಕಾರ ಸಂಸ್ಕಾರವು ಕನ್ನಡಿಗರಿಗೆ ಮತ್ತೆಂದಾದರೂ ದೊರಕಲು ಸಾಧ್ಯವೇ ? ಕಣ್ಣೆದುರಿಗೇ ಕಮರಿ ಹೋಗುತ್ತಿರುವ ಕನ್ನಡ ನಾಡಿನ ವಾಸ್ತುಶಿಲ್ಪ ಸಂಪತ್ತನ್ನು ಕಂಡು ನನ್ನ ಮನ ಮುದುಡಿತು, ಕಂಠ ಬಿಗಿದು ಬಂದಿತು.

ಹುಬ್ಬಳ್ಳಿಯ ಜಿನಾಲಯಗಳು

ಕರ್ನಾಟಕದ ವಾಣಿಜ್ಯ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳ್ ಬೀಡಾದ ಹುಬ್ಬಳ್ಳಿ ನಗರದ ಹಿರಿಮೆಯು ಅನನ್ಯವಾದುದು. ಸರ್ವಧರ್ಮ ಸಮನ್ವಯತೆ ಇಲ್ಲಿನ ಹೆಗ್ಗುರಿತು. 'ಅಹಿಂಸಾ ಪರಮೋಧರ್ಮಃ'ವೆಂಬ ಜಿನವಾಣಿಯು ಅನಂತ ಪ್ರಭಾವದಿಂದ ಮೊಳಗುತಿದಿಲ್ಲಿ. ಕಲ್ಯಾಣ ಚಾಳುಕ್ಯ ಸಾಮ್ರಾಜ್ಯದ ಆಳ್ವಿಕೆಯಲ್ಲಂತೂ ಅನುಪಮ ಕಾಂತಿರಿವಂತಿಕೆಯಿಂದ ಜೈನಧರ್ಮವು ತನ್ನ ಪ್ರಾದುರ್ಭಾವ ಗುಣವಿಶೇಷಗಳಿಂದಾಗಿಯೇ ಇಂದಿಗೂ ಅಮರವಾಗುಳಿದಿದೆ. ಇಂಡಿಯಾದ ಪರಿಸರ ಹಿನ್ನೆಲೆಯಲ್ಲಿ ಬೌದ್ಧಧರ್ಮವು ಆಕ್ರಮಣಕ್ಕೊಳಗಾಗಿ ಕ್ಷೀಣತೆಯತ್ತ ಸಾಗಿದಾಗ್ಯೂ ಜೈನಧರ್ಮವು ತನ್ನ ಮುನಿಧರ್ಮದ ಕಟ್ಟುನಿಟ್ಟಿನ ಕಟ್ಟಳೆಗಳ ನಡುವೆಯೂ ತನ್ನ ಸಾಂದ್ರತೆಯಿಂದಾಗಿ ತನ್ನ ಸೊಗಳನ್ನು ಉಳಿಕೊಳ್ಳಲು ಸಾಧ್ಯವಾಯಿತು.

ಹುಬ್ಬಳ್ಳಿಯು ಕ್ರಿ.ಶ.೧೦ ರಿಂದ ೧೨ ನೆಯ ಶತಮಾನಗಳಲ್ಲಿ ಬೆಳುವಳ ೨೦೦ ಹಾಗೂ ಹಲಸಿಗೆ ೧೨೦೦ ಆಡಳಿತ ವಿಭಾಗದ ಪ್ರಮುಖ ಭಾಗವಾಗಿದ್ದಿತು. ೧೧ನೆಯ ಶತಮಾನದ ಶಿಲಾಶಾಸನವೊಂದರಲ್ಲಿ ಹುಬ್ಬಳ್ಳಿಯನ್ನು " ಪುರಿಯ ಪೂರ್ವದ ಹಳ್ಳಿ " ಎಂಬುದಾಗಿ, ತದನಂತರ ಪುರದಳ್ಳಿ, ಪುರವಳ್ಳಿ, ಪೂಬಳ್ಳಿ, ಪುಬ್ಬಳ್ಳಿಯಾಗಿಯೂ ವಿಜಯನಗರದರಸರು ಮತ್ತು ಪೋರ್ಚುಗೀಸರ ನಡುವಿನ ವ್ಯಾಪಾರ ಒಪ್ಪಂದ ( ಕ್ರಿ,ಶ.೧೫೪೭)ದಲ್ಲಿ 'ಒಅಬೇಲಿ'ಯಾಗಿ, ಸವಣೂರು ನವಾಬರ ಆಳ್ವಿಕೆಯಲ್ಲಿ ಮಜೀದ್ ನಗರವೆಂದೂ ಪ್ರಸ್ತುತ ಹುಬ್ಬಳ್ಳಿಯಿಂದು ಕರೆಯಲ್ಪಡುತ್ತಿರುವ ನಗರವು ಜಿನಾಲಯಗಳ ಆಗರವಾಗಿ ತನ್ನ ಧಾರ್ಮಿಕ ವಸ್ತು ವೈಶಿಷ್ಟ್ಯತೆಯನ್ನು ಉಳಿಸಿಕೊಂಡು ಬಂದಿದೆ. ಒಮ್ಮೆ ಯಾಪನೀಯ ಜೈನ ಮುನಿಸಂಘದ ಪ್ರಮುಖ ನೆಲೆಯಾಗಿದ್ದು ಬಹುಶಃ ಕಾಲಕ್ರಮೇಣ ಸಂಘವು ದಿಗಂಬರ ಪಂಗಡದೊಡನೆ ಸಂಪೂರ್ಣವಿಲೀನ ವಾದಂತೆ ಕಂಡುಬರುತ್ತದೆ. ಅಂತೆಯೇ ದಿಗಂಬರ ಜೈನಸಮಾಜದ ಒಳ ಪಂಗಡಗಳಾದ ಹರದ, ಬೋಗಾರ, ಚತುರ್ಥ , ಪಂಚಮ ಮತ್ತು ಶೇತವಾಳ ವರ್ಗಗಳು ಒಂದುಗೂಡಿ ಏಕೋಭಾವದಿಂದ ಧರ್ಮ ಪ್ರಭಾವನೆಗೈಯ್ಯಲ ತುಂಭಿಸಿದುವು.

ಹುಬಳ್ಳಿಯಲ್ಲಿ ಮೂಡಿದ ಸುಂದರ ಮಂದಾರದಂತೆ ವಿಕಸಿಸಿ ಧಾರ್ಮಿಕ ಸುಧೆಯನ್ನು ಪುಸ್ಲಿಡೆ ಅನವರತ ಪಸರಿಸುತ್ತಿರುವ ನವ ಜಿನಮಂದಿರಗಳು ಪ್ರಾಚೀನ–ಅರ್ವಾಚೀನ ಧರ್ಮಜಾಗೃತಿಯ ಸಂಕೇತಗಳಾಗಿವೆ; ಜಿನಭಕ್ತರ ಮನದಾಳದಲ್ಲಿ ಬಾಳಒಟ್ಟೆಯ ಪರಮಾಗಮದ ಚಿಂತನಾಲಹರಿಯನೆಬ್ಬಿಸುತ್ತಿವೆ. ಜರ್ಜರ ಬದುಕಿನ ಒತ್ತಡದ ನಡುವೆ ಮನಃಕಷಾಯದ ಕ್ಲೇಶಗಳನ್ನು ತ್ಯಜಿಸುವಂತೆ ಮಾಡಿ ನಿರ್ಮಲೀಕರಣದ ತಾಣಗಳಾಗಿವೆ.

ಖ್ಯಾತಿವೆತ್ತ ವಿಜಯನಗರದರಸರ ಕಾಲದಲ್ಲಿ ರಾಯರ ಹುಬ್ಬಳ್ಳಿಯೆಂದು ಕರೆಯಲ್ಪಡುತ್ತಿದ್ದ ಹಳೇ ಹುಬ್ಬಳ್ಳಿಯ ಕೃಷ್ಣಾಪುರ ಗ್ರಾಮಪ್ರದೇಶದಲ್ಲಿರುವ ಶ್ರೀ ಅನಂತನಾಥ ಬಸದಿಯು ಸ್ಥಳೀಯ ಜೈನ ಇತಿಹಾಸವನ್ನು ಸುಮಾರು ೯೦೦ ವರುಷಗಳ ಹಿಂದಕ್ಕೆ ಕೊಂಡೊಯ್ಯುವುದು. ಸನಿಹದ ಹೆಗ್ಗೇರಿ ದೊಡ್ಡಕೆರೆಯಲ್ಲಿ ದೊರೆತ ತಳ ಸೇರಿದ ಜಿನಬಿಂಬಗಳು ಪ್ರಸ್ತುತ ಮಂದಿರವು ಮೈತಾಳಲು ಕಾರಣವಾಯಿತು. ಹಳೆಯ ತಲೆಮಾರಿನ ಕೆಲವು ಹಿರಿಯರು ಅರಹುವಂತೆ ಕಲ್ಬುರ್ಗಿಯ ಹರದರು ( ಶ್ರೇಷ್ಠರು) ಅರ್ಥಾತ ವ್ಯಾಪಾರಸ್ಥರು ಕಂಡ ಕನಸಿನಂತೆ ಕರೆಯ ಅಗೆತದಲ್ಲಿ ವಿಗ್ರಹಗಳು ಲಭ್ಯವಾದವು. ಶ್ರೀ ಅನಂತನಾಥ ಜಿನಾಲಯದಲ್ಲಿ ಅನಂತನಾಥನ ಮೂಲವಿಗ್ರಹವಿಲ್ಲದಿರುವುದು ಸೋಜಿಗವನ್ನುಂಟು ಮಾಡುತ್ತದೆ. ಬದಲಾಗಿ ಸುಮಾರು ಏಳು ಅಡಿಗಳೆತ್ತರದ ಕಲಾತ್ಮಕವಾಗಿರುವ ಖಡ್ಗಾಸನಿ ಚೌವ್ವೀಸ ತೀರ್ಥಂಕರರನ್ನುಳ್ಳ ಶ್ರೀ ಭಗವಾನ ಮಹಾವೀರ ತೀರ್ಥಂಕರರ ಪ್ರತಿಮೆಯಯು ಗರ್ಭಗುಡಿಯಲ್ಲಿ ಕಾಣಸಿಗುವುದು. ಪ್ರಭಾವಳಿಯಲ್ಲಿ ಬಳ್ಳಿಗಳಿಂದ ಆವೃತವಾದ ಚೌವ್ವೀಸ ತೀರ್ಥಂಕರರಿರುವಂತೆ ಪಾದದ ಇಕ್ಕೆಲಗಳಲ್ಲಿ ಯಕ್ಷ–ಯಕ್ಷಿಯರಾದ ಮಾತಂಗ ಮತ್ತು ಸಿದ್ಧಾಯಿನೀ (ಸಿದ್ಧಾಯಿಕಾ) ಯರ ಉಬ್ಬುಶಿಲಪ್ಗಳಿವೆ. ತ್ರಿಶೂಲ, ಚಕ್ರ, ವಜ್ರ ಮತ್ತು ವೊಗ್ಗನ್ನು ನಾಲ್ಕು ಕೈಗಳಲ್ಲಿ ಪಿಡಿದಿರುವ ನಿಂತ ನಿಲುವಿನ ಶ್ರೀ ಬ್ರಹ್ಮದೇವ ಅಥವಾ ಶ್ರೀ ಕ್ಷೇತ್ರಪಾಲಿನ ವಿಗ್ರಹವಿರುವುವು. ಎಡಬಲಗಳಲ್ಲಿ ಕುದುರೆ ವಾಹನಹಾಗೂ ಸೇವಕನೋರ್ವನ

ಉಬ್ಬುಕೆತ್ತನೆಗಳಿವೆ. ಪೀಠದಲ್ಲಿನ ೧೨ನೆಯ ಶತಮಾನದ ಉಲ್ಲೇಖವು ಪ್ರತಿಮೆಯನ್ನು ಶೆಟ್ಟಿಮಹಾದೇವಿಯೆಂಬ ಜಿನಭಕ್ತಯೋರ್ವಳು ಮಾಡಿಸಿ ದಾನಕೊಟ್ಟು ಸಂಗತಿಯು ತಿಳಿದುಬರುವುದು. ಅಲ್ಲದೆ ಯಾಪನೀಯ ಸಂಘದ ಕಾಣೂರು ಗಣದ ಉಲ್ಲೇಖವೂ ದೊರಕುವದು. ಶ್ರೀ ಕೂಷ್ಮಾಂಡಿನೀ ದೇವಿಯ ವಿಗ್ರಹವು ಇಲ್ಲಿಯ ಮತ್ತೊಂದು ಆಕರ್ಷಕ ಶಿಲ್ಪವಾಗಿದೆ. ಒಮ್ಮೆ ಗುಡಿಯ ಮುಂಭಾಗದಲ್ಲಿ ಪ್ರತ್ಯೇಕವಾಗಿದ್ದು ಕಾಲ ಗತಿಸಿದಂತೆ ಬಹಳ ಶಿಥಿಲವಾದ ಗೂಡಿನಲ್ಲಿದ್ದವರ ಪ್ರದಾಯಿನಿ ಮಾತೆ ಶ್ರೀ ಪದ್ಮಾವತಿ ದೇವಿಯ ವಿಗ್ರಹವನ್ನು ೧೯೪೦ರಲ್ಲಿ ಶ್ರೀ ಆಚಾರ್ಯ ೧೦೮ ಪಾಯಸಾಗರ ಮುನಿಗಳ ಕಾಲದಲ್ಲಿ ಸ್ಥಳಪಲ್ಲಟಗೊಳಿಸಲಾಯಿತು. ೧೯೬೮ರಲ್ಲಿ ಹತ್ತಿರದ ಪೇಟೆಬಸದಿಯಲ್ಲಿ ವಿಗ್ರಹವನ್ನು ಪುನರ್ ಪ್ರತಿಷ್ಠಾಪಿಸಲಾಯಿತು. ಗರ್ಭಗುಡಿಯಲ್ಲಿನ ಇತರ ಜಿನ್ಬಿಂಬಗಳೆಂದರೆ ಲೋಹದ ಶ್ರೀ ಪಾರ್ಶ್ವನಾಥ, ಶ್ರೀ ಪದ್ಮಾವತಿ ದೇವಿ ಮತ್ತು ಬಿಳಿಶಿಲೆಯ ಶ್ರೀ ಮುನಿಸುವ್ರತ ತೀರ್ಥಂಕರರವು. ಇಲ್ಲಿ ಕಾಣಸಿಗುವ ಈ ಕಾಲದ ಬರಹವನ್ನುಳ್ಳ ಜಾಗಟೆಯು ಮಹತ್ವಪೂರ್ಣದ್ದಾಗಿದೆ. ಇದರ ರೀತ್ಯ ಬಸದಿಯಲ್ಲಿ ೧೧೦೦ ವರ್ಷಗಳ ಹಿಂದೆಯೇ ಜಾಗಟೆಯೊಂದಿದ್ದಿತೆದೂ, ಅದು ಒಡೆದು ಹೋಗಲು ಶಾಲಿವಾಹನ ಶಕ ೧೭೮೪ ( ಕ್ರಿ.ಶ.೧೮೬೯) ರಲ್ಲಿ

ಹೊಸದಾಗಿ ಪ್ರಸ್ತುತ ಜಾಗಟೆಯನ್ನು ಮಾಡಿಸಲಾಯಿತೆಂದು ಪ್ರಾಚ್ಯ ಸಂಶೋಧಕ ದಿ.ಡಾ.ಪಾಂಡುರಂಗ ದೇಸಾಯಿಯವರ ದಾಖಲೆಯಿಂದ ತಿಳಿಯಲಾಗಿದೆ. ಇತ್ತೀಚೆಗೆ ದೊರೆತ ಜಿನಶಾಸನವನ್ನು ನೂತನ ಭಿತ್ತಿಗೆ ಲಗತ್ತಿಸಲಾಗಿದೆ.

ಈ ದೇವಾಲಯವು ಕಾಲಾನುಕಾಲಕ್ಕೆ ಜೀರ್ಣೋದ್ಧಾರಗೊಂಡಿರುವುದನು ತಿಳಿಯಬಹುದು. ೧೯೩೯ ಮತ್ತು ೧೯೫೩ ರಲ್ಲಿ ಎಸ್.ಪಿ.ಇಂಡಿಯವ ರಿಂದಲೂ, ೧೯೬೨ ಮತ್ತು ೧೯೭೨ ರಲ್ಲಿ ಸಾರ್ವಜನಿಕರಿಂದಲೂ ಮತ್ತು ೧೯೮೪ ರಲ್ಲಿ ಆಚಾರ್ಯರತ್ನ ಶ್ರೀ ೧೦೮ ದೇಶಭೂಷಣ ಮುನಿಮಹಾರಾಜರ ಪ್ರೇರಣೆ ಮತ್ತು ಆಶೀರ್ವಾದದಿಂದ ಶ್ರೀಮತಿ ರತ್ನಾಬಾಯಿ ನೆಲವಗಿಯವರ ಸ್ಮರಣಾರ್ಥ ರಕ್ಷಣಾಕಾರ್ಯಗಳಾಗಿವೆ. ೧೦-೮-೧೯೮೩ ರಲ್ಲಿ ಶ್ರೀ ಜಿನದತ್ತ ಭುಜಬಲಿ ಉಪಾಧ್ಯ ಗಳತಗಾ ಶಾಸ್ತ್ರಿಗಳಿಂದ ಪಂಚಕಳಸ ಪ್ರತಿಷ್ಠಾಪನೆ ಮತ್ತು ಪೂಜಾವಿಧಿಗಳಿಂದ ಬಸದಿಯ ಜೀರ್ಣೋದ್ಧಾರ ಕೈಂಕರ್ಯವು ಮತ್ತೊಂದು ತಿರುವನ್ನು ಪಡೆದಿದ್ದಿತ್ತು. ೨೧-೮-೧೯೮೫ ರಲ್ಲಿ ಹೊಂಬುಜ ಜೈನಮಠದ ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು ನೆರವೇರಿಸಿದ ಭೂಮಿ ಪೂಜೆಯಿಂದಾಗಿ ಗರ್ಭಗುಡಿಯ ಮುಂದಿನ ನೂತನ ಭವ್ಯ ಕಟ್ಟಡವು ತಲೆಯೆತ್ತಿತು, ಬಸದಿಯ ಮುಂದೆ ೩೩ ಅಡಿಗಳೆತ್ತರದ ಮಾನಸ್ತಂಭವು ವಿಜೃಂಭಿಸಿತು. ಹಿರಿಯ ಜೈನಧರ್ಮಿಷ್ಠರು ಹಾಗೂ ಮುಖ್ಯಟ್ರಸ್ಟಿಗಳಾದ ಶ್ರೀ ಅಣ್ಣಪ್ಪಾ ಚಂದ್ರಪ್ಪಾ ನೆಲವಗಿಯವರ ಕರ್ಣಧಾರತ್ವದಲ್ಲಿ ಬಸದಿಯು ಕಾಯಕಲ್ಪಗೊಂಡಿತು. ೨೩ ರಿಂದ ೨೯ ಏಪ್ರಿಲ್ ೧೯೯೩ ರಂದು ಪಂಚಕಲ್ಯಾಣ ಪ್ರತಿಷ್ಠಾಮಹೋತ್ಸವವು ನಡೆಯಿತು. ಹುಬ್ಬಳ್ಳಿಯ ಜೈನ ಇತಿಹಾಸಕ್ಕರ ತಾಣವಾಗಿ ಭಕ್ತರ ಜಾಗೃತ ಅವಸ್ಥೆಯ ಕೇಂದ್ರವಾಗಿರುವುದು ಗಮನಾರ್ಹವಾದುದು.

ಸುಮಾರು ೨೦೦ ವರುಷಗಳಷ್ಟು ಹಳೆಯದೆನ್ನಲಾದ ಅಕ್ಕಿಪೇಟೆ ಬಸದಯಲ್ಲಿನ ಗರ್ಭಗುಡಿಯಲ್ಲಿ ಶ್ರೀ ೧೦೦೮ ಪಾರ್ಶ್ವನಾಥ ತೀರ್ಥಂಕರನ ಮನ ಮೋಹಕ ಕಪ್ಪುಶಿಲೆಯ ವಿಗ್ರಹವಿದೆ. ಅಲ್ಲದೆ ಲೋಹದ ಸಿದ್ಧಪರಮೇಷ್ಠಿ, ನಂದೀಶ್ವರ, ನವದೇವತಾ ಮತ್ತು ಮಹಾವೀರ ಮೊದಲಾದ ಜಿನಬಿಂಬಗಳಲ್ಲದೆ ಶ್ರೀ ಅನಂತನಾಥ ಸ್ವಾಮಿ ಬಸದಿಯಿಂದ ತಂದಿರಿಸಲಾದ ಕರಿಶಿಲೆಯ ಶ್ರೀ ಪದ್ಮಾವತಿ ಶಿಲ್ಪವು ವಿಧಿವತ್ತಾಗಿ ಪೂಜೆ ಪುನಸ್ಕಾರಗೊಳ್ಳುತ್ತಲಿವೆ. ಬಸದಿಯ ಬಲಭಾಗದ ಪೌಳಿಯ ಪ್ರಾರಂಭದಲ್ಲಿ ಶ್ರೀ ಬ್ರಹ್ಮದೇವರ ಗಂಡು ಇದೆ.

ಹೊಸಹುಬ್ಬಳ್ಳಿಯ ಕಂಚುಗಾರ ಓಣಿಯಲ್ಲಿರುವ ಹಳೇ ಬಸದಿ, ನಡುವಿನ ಬಸದಿ ಮತ್ತು ಹೊರದರ ಬಸದಿಯೆಂದು ವಿವಿಧ ನಾಮಗಳಿಂದ ಕರೆಯಲ್ಪಡುವ ಶ್ರೀ ಆದಿನಾಥ ಜಿನಾಲಯವು ಹೊಸತು ಹಳತರ ಶ್ರೀ ಸಂಗಮ ನಿರ್ಮಾಣತಾಣವೆನ್ನಬಹುದು. ಕಪ್ಪುಶಿಲೆಯ ಶ್ರೀ ಆದಿನಾಥ ಮೂರುತಿಯು ಶ್ರೀ ಗೋಮುಖ ಮತ್ತು

ಶ್ರೀಚಕ್ರೇಶ್ವರಿ ಯಕ್ಷ ಯಕ್ಷಿಯರನ್ನೊಳಗೊಂಡಿದ್ದು ಬಿಳಿಶಿ ಿಯ ಶ್ರೀ ಚಂದ್ರನಾಥ, ಶ್ರೀ ನೇಮಿನಾಥ ವಿಗ್ರಹ ಗಳಲ್ಲದೆ ಲ ೋಹ ದ ಸಿದ್ಧಕೂಟ, ಸಿದ್ಧಪರಮೇಷ್ಠಿ, ನವದೇವತಾ ಮತ್ತು ಪಾರ್ಶ್ವನಾಥ ಮೊದಲಾದ ಅನೇಕ ಬಿಂಬಗಳು ಕಾಣಸಿಗುವುವು. ಇಲ್ಲಿನ ಕರಿಶಿ ಿಯ ಶ್ರೀ ಜ್ವಾಲಾಮಾಲಿನಿ ದೇವಿಯ ವಿಗ್ರಹವನ್ನು ಹ ಳೇ ಹುಬ್ಬಳ್ಳಿಯ ಕಿಲ್ಲಿ ಬಸದಿಯಿಂದ ತಂದಿರಿಸಿದೆ ಯೆನ್ನಲ ಾದೆ. ದೇವಾಲಯವು ೧೯೪೦ರಲ್ಲಿ ಶ್ರೀ ೧೦೮ ಪಾಯಸಾಗರ ಮುನಿಗಳ ಸನ್ನಿಧಿಯಲಲ್ಲೊಮ್ಮೆ ಜೀರ್ಣೋದ್ಧಾರಗೊಂಡಿದ್ದು ಪ್ರಸ್ತುತ ಆಧುನಿಕ ವಾಸ್ತು ವಿನ್ಯಾಸದಿಂದ ಮತ್ತೊಮ್ಮೆ ನವೀಕರಣಗೊಳ್ಳುತ್ತಲಿದೆ.

ಶ್ರೀ ಮಹ ಾವೀರ ಬೀದಿಯಲ್ಲಿರುವ ಕೌಲಪೇಟ ಬಸದಿ ಅಥವಾ ದೊಡ್ಡ ಬಸದಿಯೆಂದು ಕರೆಯಲ್ಪಡುವ ಶ್ರೀ ೧೦೦೮ ಶಾಂತಿನಾಥ ಬಸದಿಯು ಜಾತ್ತರೇಯ ವಾಸ್ತುಮಾದರಿಯನ್ನು ಹ ೋಲುವಂತಿದ್ದು ಅತ್ಯಂತ ಕಲ ಾಮಯ ನಿರ್ಮಾಣವಾಗಿದೆ. ಕಪ್ಪುಶಿಲ ಿಯ ಶ್ರೀ ಶಾಂತಿನಾಥ ಮೂಲಮೂರುತಿಯು ಗರುಡ ಮತ್ತು ಮಹ ಾಮಾನ್ಸಿ ಯಕ್ಷಯಕ್ಷಿರಿಂದೊಡಗೂಡಿದ ಮನವೊಹ ಕ ಕೆತ್ತನೆಯಾಗಿದೆ. ಇದಲ್ಲದೆ ಲ ೋಹ ದ ಶ್ರೀ ಸಿದ್ಧಪರಮೇಷ್ಠಿ, ಚೌವ್ವೀಸ ತೀರ್ಥಂಕರರು, ನವದೇವತಾ, ಬಾಹ ುಬಲಿ, ಪದ್ಮಾವತಿ ಮತ್ತು ಜ್ವಾಲ ಾಮಾಲಿನ ವಿಗ್ರಹ ಗಳನ್ನು ದರ್ಶಿಸಬಹ ುದು. ಗರ್ಭಗುಡಿಯ ಬಲಭಾಗದ ಗುಡಿಯಲ್ಲಿ ಪಚ್ಚಶಿಲ ಸಿದ್ಧಪರಮೇಷ್ಠಿ, ಬಿಳಿಶಿ ಿಯ ಶ್ರೀ ಆದಿನಾಥ, ಪಂಚಲ ೋಹ ದ ಶ್ರೀ ಸರಸ್ವತಿಯಲ್ಲದೆ ಇಂದ್ರನ ಪ್ರತಿಮೆಗಳಿವೆ. ಎಡಭಾಗದ ಗುಡಿಯಲ್ಲಿ ಶ್ರೀ ಪಾರ್ಶ್ವನಾಥ, ಮುಂಗಡೆಯ ಕಿರಿದಾದ ಶ್ರೀ ಚಂದ್ರಪ್ರಭ ಮಂದಿರದಲ್ಲಿ ಮೂಲ ಮೂರುತಿಯಲ್ಲದೆ ಪಚ್ಚಶಿಲ ಾ ಪಾರ್ಶ್ವನಾಥ ಮತ್ತು ಶಾಂತಿನಾಥ ವಿಗ್ರಹ ಗಳಿದ್ದರೆ ಶ್ರೀ ಪಾರ್ಶ್ವನಾಥ ಮಂದಿರದಲ್ಲಿ ಮೂಲ ಮೂರ್ತಿಯಲ್ಲದೆ ಶ್ರೀ ಬ್ರಹ ್ಮದೇವರ ಗುಂಡು ಇರುವುದ್ದು.

ಇಲ್ಲಿ ದೊರೆತ ಅಂದಿನ ನಾಣ್ಯಗಳ ರೀತ್ಯ ಈ ದೇವಾಲಯವು ಸುಮಾರು ಒಂದು ಶತಮಾನದಷ್ಟು ಹ ಳೆಯ ಕಟ್ಟಡವೆನ್ನಲ ಾದೆ. ೧೯೮೭ ರಲ್ಲಿ ಸುಧಾರಣೆ ಗೊಂಡು ಮೂಲಮೂರ್ತಿಯ ಪುರಾರ್ ಪ್ರತಿಷ್ಠಾಪನ ಮಹ ೋತ್ಸವವು ನೆರೆವೇರಿದೆ.

ಮೂರುಸಾವಿರ ಮಠದ ಸಮಿ ದಲ್ಲಿರುವ ಶ್ರೀ ಚಂದ್ರನಾಥ ಬಸದಿಯು ಚಿಕ್ಕ ಹ ಾಗೂ ಚೊಕ್ಕನಾದ ಕಟ್ಟಡವಾಗಿದ್ದು ( ಸ್ಥಾಪನೆ: ೧೯೦೪) ಗರ್ಭಗುಡಿಯಲ್ಲಿಲ ೋಹ ದ ಶ್ರಿ ಬಾಹ ುಬಲಿ, ನವದೇವತಾ, ಸಿದ್ಧಕೂಟ, ಚೌವ್ವೀಸ ತೀರ್ಥಂಕರರು ಮತ್ತು ಶ್ರೀ ಪದ್ಮಾವತಿ ಮುತಾದ ಅಂದವಾದ ಜಿನಬಿಂಬಗಳು ಮತ್ತು ಯಕ್ಷಯಕ್ಷಿಯರ ಬಿಂಬಗಳಲ್ಲದೆ ಋಷಿಮಂಡಲ, ಸೊದ್ಧಚಕ್ರ, ಷೋಡಶ ಭಾವನಾ ಮತ್ತು ದಶಲಕ್ಷಣ ಯಂತ್ರಗಳೂ ಕಾಣಸಿಗುವುವು.

ಸ್ಟೇಷನ್ ರಸ್ತೆಯ ಜೈನ ಬೋರ್ಡಿಂಗ್ ಪ್ರಾಂಗಣದಲ್ಲಿರುವ ಶ್ರೀ ಚಂದ್ರ ಜಿನೇಂದ್ರ ಅಥವಾ ಶ್ರೀ ಚಂದ್ರಪ್ರಭು ತೀರ್ಥಂಕರ ದೇವಾಲಯವನ್ನು ಮಹಾದ್ವಾರದ ಮೇಲುಗಡೆಯ ಶಿಲಾಫಲಕದಲ್ಲಿ ಉಲ್ಲೇಖಿಸಿರುವಂತೆ ಹುಬ್ಬಳ್ಳಿಯ ಶ್ರೀ ಟೇಕಣ್ಣವರ ಧರಣೇಂದ್ರಪ್ಪನವರಿಂದ ಮಹಾವೀರ ಸಂವತ್ಸರ ೨೪೪೭ ಕ್ರಿ.ಶ.೧೯೨೧) ರಲ್ಲಿ ಕಟ್ಟಿಸಲ್ಪಟ್ಟಿತು. ಅವರು ತವನಪ್ಪನವರು ಶ್ರೀ ಚಂದ್ರಪ್ರಭ ತೀರ್ಥಂಕರನ ಪ್ರತಿಷ್ಠಾನ ಮಾಡಿಸಿದರು. ಸನ್ಮಾನ್ಯ ಶ್ರೀ ಎ.ಎ. ಮಾಂಟಗಣಿ ಮತ್ತು ರಂಗೌಡ ಪಾಟೀಲರು ಕಟ್ಟಡದ ಉಸ್ತುವಾರಿಯನ್ನು ವಹಿಸಿದ್ದರು ಎಂದಿದೆ. ಇದರ ಪಂಚಕಲ್ಯಾಣ ಪೂಜ್ಯೋತ್ಸವವು ೧೯೨೪ ರಲ್ಲಿ ನೆರವೇರಿದ್ದಿತು. ೨೭–೩–೧೯೦೯ ರಲ್ಲಿ ಸ್ಥಾಪನೆಗೊಂಡ ಜೈನ್ ಬೋರ್ಡಿಗ್ ತಾಣವು ವಿದ್ಯಾಲಯ ಹಾಗೂ ಪೂಜಾಲಯ ಸಂಗಮಸ್ಥಾನವಾಗಿಹುದು. ದಾನಂ ದಾರಿದ್ರ್ಯಹರಂ ಎಂಬ ಜಿನ ಸಂದೇಶವನ್ನು ಸಾರುತ್ತಿರುವ ಮಂದಿರದಲ್ಲಿ ಶ್ವೇತಶಿಲೆಯ ಪದ್ಮಾಸನಿ ಶ್ರೀ ಚಂದ್ರನಾಥ. ಲೋಹದ ಶ್ರೀ ಪಾರ್ಶ್ವನಾಥ. ಶ್ರೀ ಪದ್ಮಾವತಿ, ಶ್ರೀ ಜ್ವಾಲಾಮಾಲಿನಿ ವಿಗ್ರಹಗಳಲ್ಲದೆ ಕರಿಶಿಲೆಯ ಶ್ರೀ ಪಾರ್ಶ್ವನಾಥ ಸ್ವಾಮಿಯ ಶಿಲ್ಪವೂ ಇಲ್ಲಿವೆ.

ಶ್ವೇತಾಂಬರ ಮಂದಿರಗಳು

ರಾಜಾಸ್ಥಾನ ಮತ್ತು ಗುಜರಾತ ಪ್ರಾಂತ್ಯಗಳಿಂದ ವಾಣಿಜ್ಯ ವ್ಯಾಪಾರಾದಿಗಳಿಗಾಗಿ ಕರ್ನಾಟಕಕ್ಕೆ ಆಗಮಿಸಿ ನೆಲೆನಿಂತ ಶ್ವೇತಾಂಬರ ಪಂಥದ ಬಂಧುಗಳು ನಗರದಲ್ಲಿ ಆಕರ್ಷಕ ಜಿನಾಲಯಗಳನ್ನು ನಿರ್ಮಿಸಿರುವರು. ಕೇಶವಾಪೂರದಲ್ಲಿರುವ ಶ್ರೀ ೧೦೦೮ ನಾಕೋಡ ಪಾರ್ಶ್ವನಾಥ ಜಿನಾಲಯವನ್ನು ಶಾ. ಕೇಸರಿಮಲ್ ನವಾಜಿಯವರ ಆಕಾಂಕ್ಷೆಯ ನಿಮಿತ್ತವಾಗಿ ೩–೧೨–೧೯೭೫ ರಲ್ಲಿ ಕಟ್ಟಲಾಯಿತು. ಗರ್ಭಗುಡಿಯ ಮೂಲಮೂರ್ತಿಯಾಗಿ ಕರಿಶಿಲೆಯ ಪದ್ಮಾಸನಿ ಶ್ರೀ ಪಾರ್ಶ್ವನಾಥ ಶಿಲ್ಪವು ವಿಜೃಂಭಿಸುತ್ತಾ ಅದರ ಇಕ್ಕೆಲಗಳಲ್ಲಿ ಶ್ರೀ ಕುಂಥುನಾಥ ಮತ್ತು ಶ್ರೀ ಮುನಿಸುವ್ರತ ಮೂರುತಿಗಳಿವೆ. ಅಂಗಳದಲ್ಲಿ ಶ್ರೀ ನಾಕೋಡ ತೀರ್ಥ, ಶ್ರೀ ಸಮೇದ ಶಿಖರಜಿ, ಶ್ರೀ ಶತ್ರುಂಜಯ ಮತ್ತು ಶ್ರೀ ಗಿರಿನಾರ್ ಚಿತ್ರಪಟಗಳು ಭಿತ್ತಿಗಳನ್ನು ಅಲಂಕರಿಸಿದ್ದರೆ ಗೂಡುಗಳಲ್ಲಿ ಶ್ರೀ ಧರಣೇಂದ್ರ ಮತ್ತು ಶ್ರೀ ಪದ್ಮಾವತಿ ಯಕ್ಷ ಯಕ್ಷಿಯರು ಮಣಿಭದ್ರ ಹಾಗೂ ನಾಕೋಡ ಭೈರವ ಶ್ವೇತ ಶಿಲಾಶಿಲ್ಪಗಳಿವೆ. ಪೂಜ್ಯ ಸನ್ಯಾಸಿ ಮುನಿಶ್ರೀ ಭದ್ರಾನಂದ ವಿಜಯಜೀಯವರ ಕೃಪಾಶೀರ್ವಾದದಿಂದಾಗಿ ಭಕ್ತರು ಪುನೀತರಾಗಿರುವರು.

ಕಂಚಗಾರ ಗಲ್ಲಿಯ ಶ್ರೀ ಶಾಂತಿನಾಥ ತೀರ್ಥಂಕರ ಬಸದಿಯನ್ನು ಸುಮಾರು ೮೦ ವರ್ಷಗಳ ಹಿಂದೆ ನಿರ್ಮಿಸಲಾಯಿತು. ಅತ್ಯಂತ ಮನೋಹರವಾಗಿರುವ ಮಂದಿರದ ಗರ್ಭಗುಡಿಯ ಶ್ರೀ ಶಾಂತಿನಾಥನ ಇಕ್ಕೆಲಗಳಲ್ಲಿ ಶ್ರೀ ಚಂದ್ರಪ್ರಭ ಮತ್ತು ಶ್ರೀ ಧರ್ಮನಾಥ ತೀರ್ಥಂಕರರ ಶ್ವೇತ ಪದ್ಮಾಸನ ವಿಗ್ರಹಗಳಿವೆ.

ಪಕ್ಕದ ವಿಶಾಲವಾದ ಹಜಾರದಲ್ಲಿ ಗಿರಿನಾರ್‌ಜೀ, ಶತ್ರುಂಜಯ ಚಿತ್ರಪಠಗಳಲ್ಲದೆ ಶ್ರೀ ಸಿದ್ಧಚಕ್ರಯಂತ್ರದ ಸುಂದರ ಮಾದರಿಯಿದೆ.

ಇದರ ಪಕ್ಕದಲ್ಲಿಯೇ ಇರುವ ಕಚ್ಛ ಓಸ್ವಾಲ್ ಶ್ರೀ ಅಜಿತನಾಥ ತೀರ್ಥಂಕರನ ದೇವಾಲಯದಲ್ಲಿ ಶ್ರೀ ಪಾರ್ಶ್ವನಾಥ, ಚೌವ್ವೀಸ ತೀರ್ಥಂಕರರು ಮತ್ತು ಚತುರ್ಮುಖ ತೀರ್ಥಂಕರರ ದಿಗಂಬರ ಶಿಲ್ಪಗಳಿರುವುದು ಗಮನಾರ್ಹವಾದುದು. ಇಲ್ಲಿಯೇ ಅಷ್ಟಾಪದಜಿ ತೀರ್ಥಂಕರ ಪೀಠ, ರಾಜಗೃಹ, ತಾರಂಗಾಜಿ ಅಭೂಜಿ, ಗಿರಿನಾರ್‌ಜಿ, ಶತ್ರುಂಜಯ, ಭದ್ರೇಶ್ವರ ಚಂಪಾಪುರಿ, ಪಾವಾಪುರಿ, ಮತ್ತು ರಾಣಕಪುರ ಮಹಾಕ್ಷೇತ್ರಗಳ ಚಿತ್ರಪಟಗಳು ಗೋಡೆಗಳನ್ನು ಅಲಂಕರಿಸಿವೆ.